# ಅಧ್ಯಯನ – 5 Study V

# ಪಾಪ ನಿವೃತ್ತಿಯ ಮಹಾಯಾಜಕ (ಮಧ್ಯಸ್ತನು)

## "ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು"

## ಮತ್ತು

## ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ

# The High Priest (Mediator) of the Atonement

## "Made like unto his Brethern"

## and

## Touched with a Feelings of our Infirmities

**ಆತನ ಸಹೋದರರು ಯಾರು ? ಯಾವುದರಲ್ಲಿ ಹೋಲಿಕೆಯು ಒಳಗೊಂಡಿರುತ್ತದೆ? – ಆತನ ಯಾವ ರೀತಿಯಲ್ಲಿ ಎಲ್ಲಾ ಅಂಶಗಳಲ್ಲಿ ನಮ್ಮಂತೆ ಶೋಧನೆಗೆ ಗುರಿಯಾದನು, ಆದರೂ ಪಾಪಮಾಡಲಿಲ್ಲ? – ಅಡವಿಯಲ್ಲುಂಟಾದ ಶೋಧನೆಗಳು – ಅವುಗಳಿಗೂ ನಮ್ಮವುಗಳಿಗೂ ಇರುವ ಹೋಲಿಕೆ – ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸಬಲ್ಲದು – ಶ್ರಮೆಗಳ ಮೂಲಕವಾಗಿ ನಮ್ಮ ಕರ್ತನು ಯಾವ ಅರ್ಥದಲ್ಲಿ ಬಾಧೆಗಳ ಮೂಲಕ ಸಿದ್ದಿಗೆ ತರುವದು ಆತನಿಗೆ ಯುಕ್ತವಾಗಿತ್ತು – ಮಗನಾಗಿದ್ದರೂ ಆತನು ವಿಧೇಯತೆಯನ್ನು ಕಲಿತುಕೊಂಡನು – ಆತನನ್ನು ಯಾವ ರೀತಿಯಲ್ಲಿ ಪಾಪಮಯ ದೇಹವುಳ್ಳವುಳ್ಳವನನ್ನಾಗಿ ಮಾಡಲಾಯಿತು?, ಆದರೂ ಆತನು ಪಾಪ ಮಾಡಲಿಲ್ಲ – "ಆತನು ತಾನೇ ನಮ್ಮ ಬೇನೆಗಳನ್ನು ಹೊತ್ತುಕೊಂಡನು" – ಆತನು 'ಮನಮುಟ್ಟಿದವನು' ಆದುದು ಹೇಗೆ? . . .**

**"ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣೆಮಾಡುವುದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು" (ಇಬ್ರಿಯ 2:17).**

ಮಾನವರೊಂದಿಗಿನ ನಮ್ಮ ಕರ್ತನ ಸಂಬಂಧವನ್ನು ಪ್ರಕಟಿಸುವಂತೆ ಪರಿಶುದ್ಧ ಗ್ರಂಥದಲ್ಲಿನ ಎಲ್ಲಾ ಹೇಳಿಕೆಗಳಲ್ಲಿ ಎರಡು ಜನಪ್ರಿಯವಾದ ಆದರೆ ಪರಸ್ಪರ ವಿರೋಧಿ ಸಾಲುಗಳು ನಮ್ಮನ್ನು ತಟ್ಟುತ್ತವೆ ಮತ್ತು ಭಿನ್ನಾಭಿಪ್ರಾಯವನ್ನು ಉಂಟುಮಾಡುವವುಗಳಾಗಿವೆ; ಮತ್ತು ಮೂರನೆಯ ಮತ್ತು ಸತ್ಯವಾದ ಸಾಲು ಮಾತ್ರವೇ ವಿವಿಧ ದೇವರವಾಕ್ಯಗಳನ್ನು ಸಂಧಾನಪಡಿಸಲು ಮತ್ತು ಪವಿತ್ರ ಕಾರಣಕ್ಕಾಗಿ ತೃಪ್ತಿಗೊಳಿಸಲು ಶಕ್ಯವಾಗಿದೆ. ಎರಡು ಸುಳ್ಳಾದ ಆದರೆ ಬಹು ಜನಪ್ರಿಯವಾದ ವಿಚಾರಸರಣಿಗಳಲ್ಲಿ ಬಹುಜನಪ್ರಿಯವಾದ ಮೊದಲನೆಯದು "ನಮ್ಮ ಕರ್ತನಾದ ಯೇಸುವೇ ಸರ್ವಶಕ್ತನಾದ ದೇವರಾದ ಯೆಹೋವನು" ಎಂದು ಸಾಧಿಸುತ್ತದೆ. ಆತನು ಮಾನವ ಪರೀಕ್ಷೆಗಳ, ಶೋಧನೆಗಳ ಮತ್ತು ವಾತಾವರಣಗಳ ನಿಜವಾದ ಯಾವುದೇ ಸಂವೇದನಾಶಕ್ತಿಗಳಿಲ್ಲದೆ ಕೇವಲ ಮಾನವ ಶರೀರವನ್ನು ಧರಿಸಿಕೊಂಡನು. ಮತ್ತೊಂದು ವಿಚಾರಸರಣಿಯ ಸಾಧನೆ ಆತನು ಪಾಪಮಯ ಮಾನವನು, ನಮ್ಮ ಜನಾಂಗದ ಎಲ್ಲಾ ದೋಷಗಳಲ್ಲಿ ಇತರರಂತೆಯೇ ಪಾಲುದಾರನು. ಆದರೆ ಪಾಪದ ಗತಿಯನ್ನು ತಡೆಗಟ್ಟುವಲ್ಲಿ, ಅದರೊಂದಿಗೆ ಕಾದಾಡುವಲ್ಲಿ ಬಹಳ ಫಲಪ್ರಧವಾದನು ಎಂಬುದು. ಈ ಎರಡೂ ವಿಚಾರಸರಣಿಗಳೂ ತಪ್ಪಾದವುಗಳು ಮತ್ತು ಸತ್ಯವು ಈ ಎರಡರ ಮಧ್ಯೆಯೇ ಇದೆ ಎಂದು ತೋರಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಸತ್ಯವೆಂದರೆ "ದೇವರ ಸ್ವರೂಪ"ದಲ್ಲಿದ್ದ ದೇವರ ವಾಕ್ಯನಾದ 'ಲೋಗೋಸ್' ಆತ್ಮಸ್ವರೂಪಿಯಾಗಿದ್ದವನು ಮಾಂಸ ಶರೀರ ಧಾರಿಯಾದನು. ಅಂದರೆ, ಆತನು ನಿಜವಾದ ಮಾನವನಾದನು. ಮಾನವನಾದ ಈ ಕ್ರಿಸ್ತ ಯೇಸುವು ಪಾಪಿಗಳಿಂದ ಪ್ರತ್ಯೇಕವಾಗಿದ್ದು ಓರ್ವ ಪರಿಪೂರ್ಣನಾದ ವ್ಯಕ್ತಿಯಾಗಿದ್ದನು. ಮೊದಲನೆಯ ಮಾನವನ ಪತನವು ನಮ್ಮ ಜನಾಂಗವನ್ನು ಒಳಗೊಂಡಂತೆ ಹಾಗೆಯೇ ಆತನ ವಿಮೋಚನೆಯೂ ನಮ್ಮ ಜನಾಂಗವನ್ನು ಒಳಗೊಳ್ಳುತ್ತದೆ. ಆದಕ್ಕಾಗಿ ಸೂಕ್ತ ಬೆಲೆ ತೆರಲು ಪರಿಪೂರ್ಣ ಮನುಷ್ಯನು ತನ್ನನ್ನು ಸಿದ್ಧಪಡಿಸಿಕೊಳ್ಳುತ್ತಿದ್ದನು.

ಈ ಸಂಬಂಧದಲ್ಲಿ ದೇವರ ವಾಕ್ಯಕ್ಕನುಸಾರವಾಗಿರುವ ಸರಿಯಾದ ದೃಷ್ಟಿಕೋನವನ್ನು ಬಯಸುವುದು ಸಮಂಜಸವಾಗಿದೆ. ಆದುದರಿಂದ, ನಾವು ನಮ್ಮ ಕರ್ತನು ಕುಂದುಕೊರತೆಯುಳ್ಳವನು, ಪತನಗೊಂಡ ಜನಾಂಗದವರಂತೆ ಮೋಹಕ್ಕೆ ಬಲಿಯಾದವನು ಎಂದು ತೋರಿಸುವಂತೆ ವಿರೂಪಗೊಳಿಸಿರುವ ಅಥವಾ ತಪ್ಪಾಗಿ ಉಪಯೋಗಿಸಿರುವ ವಿವಿಧ ಗ್ರಂಥ ವಾಕ್ಯಗಳನ್ನು ಪರೀಕ್ಷಿಸಲಿದ್ದೇವೆ. ಆತನು ಇಂಥಾಃ ಸ್ಥಿತಿಯಲ್ಲಿರುತ್ತಿದ್ದರೆ ನಮಗೆ ಅಸಾಧ್ಯವಾಗಿರುವಂತೆ ಆತನಿಗೂ ದೇವರ ನಿಯಮಗಳನ್ನೂ, ಅವುಗಳ ಎಲ್ಲಾ ಲಕ್ಷಣಗಳನ್ನು

ಸಮರ್ಪಕವಾದ ರೀತಿಯಲ್ಲಿ ಕಾಪಾಡಲು ಸಾಧ್ಯವಾಗುತ್ತಿದ್ದಿಲ್ಲ ಎಂಬುದನ್ನು ನಾವು ಎತ್ತಿ ಹಿಡಿಯುತ್ತೇವೆ. ದೇವರ ನಿಯಮಗಳು ಓರ್ವ ಸಮರ್ಪಕನಾದ ಮನುಷ್ಯನ ಸಾಮರ್ಥ್ಯವನ್ನು ಅಳೆಯುವುದಾಗಿದೆ. ಅಪರಿಪೂರ್ಣ ಮನುಷ್ಯನ ಅಳತೆಗೆ, ಸಮರ್ಥತೆಗೆ ಮೀರಿದ್ದಾಗಿದೆ. ನಮ್ಮ ಕರ್ತನಲ್ಲಿ ಪಾಪವಿದ್ದಿಲ್ಲ, ಆತನು ತಂದೆ ದೇವರಿಗೆ ಸಂಪ್ರೀತನಾಗಿದ್ದನು ಮತ್ತು ಆದಾಮನ ಪಾಪದ ಈಡು ಬಲಿಯ ಬೆಲೆಯಾಗಿ, ಪ್ರಾಯಶ್ಚಿತ್ತ ಬಲಿಯಾಗಲು ಅಂಗೀಕಾರಾರ್ಹನಾಗಿದ್ದನು ಎಂಬ ಸತ್ಯವು ಪರೋಕ್ಷವಾಗಿ ಆತನ ಸಮರ್ಪಕತೆಯನ್ನು ರುಜುವಾತುಪಡಿಸುತ್ತದೆ, ದೇವರ ವಾಕ್ಯಗಳು ಸಹಾ ಎಲ್ಲಾ ಕಡೆಗಳಲ್ಲಿಯೂ ಇದನ್ನೇ ಬೋಧಿಸುತ್ತವೆಂಬುದನ್ನು ನಾವು ಎತ್ತಿಹಿಡಿಯುತ್ತೇವೆ.

ಆದರೆ, ನಮ್ಮ ಕರ್ತನ ಸಹೋದರರುಗಳು ನಿಷ್ಕಳಂಕರಲ್ಲ, ಅವರು ಪಾಪಿಗಳಿಗಿಂತ ಬೇರೆಯಾದವರಲ್ಲ. ಹಾಗಾದರೆ, ಆತನು ತನ್ನ 'ಸಹೋದರರಿಗೆ ಸಮಾನನಾಗಬೇಕಾದರೂ' ಪಾಪಿಗಳಿಂದ ಪ್ರತ್ಯೇಕವಾಗಿರಲು ಹೇಗೆ ಸಾಧ್ಯ?. ಆತನ ಸಹೋದರರು ಎಂಬುದಾಗಿ ಇಲ್ಲಿ ಸೂಚಿಸುವವರು ಮಾನವ ಜಾತಿಯ ಈ ಲೋಕದ ಒಟ್ಟಾರೆ ಪಾಪಿಗಳು ಅಲ್ಲ. ಮಾನವನಾದ ಆದಾಮನು ದೇವರಿಂದ ಸೃಷ್ಟಿಸಲ್ಪಟ್ಟವನು ಆಗಿದ್ದು ಆತನು ದೇವರ ಅಪ್ಪಣೆಯನ್ನು ಮೀರಿ ಪಾಪಮಾಡುವವರೆಗೆ, ನಿಜವಾಗಿಯೂ ದೇವರ ಮಗನಾಗಿದ್ದನು. (ಲೂಕ 3:38). ಆದರೆ, ನಂತರದಲ್ಲಿ ಅಲ್ಲ. ಆತನ ಸಂತಾನದವರೆಲ್ಲರೂ 'ಕ್ರೋಧದ ಮಕ್ಕಳು' ಎಂಬಂತೆ ದೇವರ ರೌದ್ರಕ್ಕೆ ಗುರಿಯಾಗಿದ್ದರು (ಎಫೆಸ. 2:3). ಲೋಕದ ಮೇಲೆ ಇದ್ದ ದೇವರ ಖಂಡನೆಯಿಂದ ತಪ್ಪಿಸಿಕೊಂಡವರು ಮತ್ತು ದೇವರ ಸಾಮರಸ್ಯಕ್ಕೆ ಕ್ರಿಸ್ತನ ಮೂಲಕ ಹಿಂತಿರುಗಿ ಬಂದವರು ಮಾತ್ರವೇ ದೇವರ ವಾಕ್ಯದ ಪ್ರಕಾರವಾಗಿ ಆತನ ಮಕ್ಕಳು ಎಂಬ ಅಧಿಕಾರವನ್ನು ಪಡಕೊಳ್ಳುತ್ತಾರೆ (ಯೋಹಾನ 1:12). ಇತರರ ಬಗ್ಗೆ ನಮ್ಮ ಕರ್ತನು ಪ್ರಕಟಿಸಿ **"ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ"** (ಯೋಹಾನ 8:44) ಎಂದೆನ್ನುತ್ತಾನೆ. ನಮ್ಮ ಕರ್ತನಾದ ಯೇಸುವು ಎಂದೂ ತನ್ನನ್ನು ಸೈತಾನನ ಮಕ್ಕಳಲ್ಲಿ ಒಬ್ಬನು ಅಥವಾ ತಾನು 'ಕ್ರೋಧದ ಮಕ್ಕಳಲ್ಲಿ ಒಬ್ಬನು' ಎಂದೆಣಿಸಿಕೊಳ್ಳಲಿಲ್ಲ. ಆದರೆ ಆತನು ಪ್ರಕಟಿಸಿ ಹೇಳಿದ್ದೇನೆಂದರೆ **"ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ"** (ಯೋಹಾನ 8:42) ಎಂಬುದಾಗಿ. ಇನ್ನೂ ಸಹಾ ಕ್ರೋಧದ ಮಕ್ಕಳಾಗಿರುವವರಲ್ಲಿ ಯಾರನ್ನಾದರೂ ಆತನು ತನ್ನ ಸಹೋದರನೆಂದು ಅಂಗೀಕರಿಸಲಿಲ್ಲ. ಕರ್ತನ ಮಕ್ಕಳು ಎಂದು ಗುರುತಿಸಲ್ಪಟ್ಟವರೆಂದರೆ ಲೋಕದ ಮೇಲಿರುವ ಖಂಡನೆಯಿಂದ ತಪ್ಪಿಸಿಕೊಂಡು, ಕ್ರಿಸ್ತನ ಪವಿತ್ರ ರಕ್ತದ ಮೂಲಕ ತಂದೆ ದೇವರ ಬಳಿಗೆ ಬಂದವರು ಮಾತ್ರವೇ ದೇವರ ಕುಟುಂಬದ ಮಕ್ಕಳಾಗುವ ದತ್ತು ಸ್ವೀಕಾರದ ಹಕ್ಕನ್ನು ಮತ್ತು ದೇವರ ರಾಜ್ಯವು ಸ್ಥಾಪನೆಗೊಂಡಾಗ ದೇವರ ಮಕ್ಕಳಾಗುವ ವಾಗ್ದಾನವನ್ನು ಪೂರ್ಣವಾಗಿ ಪಡೆಯುತ್ತಾರೆ. (ರೋಮಾ. 8:15, 23; ಗಲಾತ್ಯ 4:5 ಇವುಗಳನ್ನು ನೋಡಿರಿ). ಯಾಕೆಂದರೆ, ಇವರುಗಳು ಕ್ರಿಸ್ತನ ರಕ್ತದ ಮೂಲಕ ನೀತಿ ನಿರ್ಣಯ ಹೊಂದಿದವರು, ಆದಾಮನ ಶಾಪದಿಂದ ಮುಕ್ತರಾದವರೆಂದು ಎಣಿಸಲ್ಪಟ್ಟವರು, ನೀತಿವಂತರೆಂದು ನೇಮಿತರಾಗಿದ್ದಾರೆಂದು ಎಣಿಸಲ್ಪಟ್ಟವರೂ ಆಗಿದ್ದಾರೆ. ದೇವರ ಕೃಪೆಯ ಹಾಗೂ ಪಾಪಿಗಳಿಂದ ಪ್ರತ್ಯೇಕವಾಗಿರುವ ಅದೇ ಆಧಾರದಲ್ಲಿ ಅವರು ಈ ಲೋಕದ ಯಾವುದೇ ಅರ್ಥದಲ್ಲಿ ನಮ್ಮ ಕರ್ತನಾದ ಯೇಸುಕ್ರಿಸ್ತನಂತೆ ಇರುವವರೂ, "ಆತನ ಸಹೋದರರುಗಳು" ಆಗಿದ್ದಾರೆ. ಈ ವರ್ಗದವರ ಪ್ರತಿಷ್ಠೆಯ ಬಗ್ಗೆ ನಮ್ಮ ಕರ್ತನು ಹೇಳುವುದೇನೆಂದರೆ – **"ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ, ನಾನು ನಿಮ್ಮನ್ನು ಲೋಕದ ಕಡೆಯಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ . . . ."** (ಯೋಹಾನ 15:19) ಮತ್ತು – **"ನಾನು ಲೋಕದವನಲ್ಲದೇ ಇರುವ ಪ್ರಕಾರ ಇವರೂ ಲೋಕದವರಲ್ಲ"** (ಯೋಹಾನ 17:14) ಎಂಬುದಾಗಿ. ಈ ದೃಷ್ಟಿಕೋನದಿಂದ ನಮ್ಮ ಕರ್ತನು ತನ್ನ ಸಹೋದರರಂತೆ, ಎಲ್ಲಾ ನಿರ್ದಿಷ್ಟತೆಯಲ್ಲಿಯೂ ಮಾಡಲ್ಪಟ್ಟನು ಎಂಬುದನ್ನು ನಾವು ಮನಃಪೂರ್ವಕವಾಗಿ ತಿಳಿದುಕೊಳ್ಳಬಹುದು. ಆತನು ತನ್ನನ್ನು ತಗ್ಗಿಸಿಕೊಂಡು ಮಾನವ ಶರೀರಧಾರಿಯಾದಾಗ ಅವರು ಆತನ ಸಹೋದರರಾಗಿರಲಿಲ್ಲ. ದೇವರಿಂದ ಮುಂತಿಳಿಸಿದ್ದ (ಎಫೆಸ 1: 5,11; ರೋಮಾ. 8:9 ನೋಡಿರಿ) ಈ ವರ್ಗದವರ ಹೊರತಾಗಿ ಆಗ ಆತನಿಗೆ ಸಹೋದರರುಗಳೇ ಇರಲಿಲ್ಲ. ಆದರೆ ದೈವಿಕ ವ್ಯವಸ್ಥೆಯ ಪ್ರಕಾರ ದೇವರು ತಾನು ನ್ಯಾಯವಂತನು, ಆದರೂ ಪಾಪಿಗಳ ಸಂತಾನದಲ್ಲಿ ಕ್ರಿಸ್ತನ ಮೂಲಕ ದೇವರ ಕೃಪೆಯನ್ನು ಒಪ್ಪಿಕೊಳ್ಳುವ ಕಾರಣದಿಂದ ಅವರಿಂದ ಮುಚ್ಚಲ್ಪಟ್ಟು ಆರೋಪಿಸಲ್ಪಡದಿರುವ, ಆದರೆ ಆತನಿಗೆ ಅರೋಪಿಸಲ್ಪಟ್ಟಿರುವ ಪಾಪವನ್ನು ಕ್ಷಮಿಸುವುದು ನ್ಯಾಯಸಮ್ಮತವಾಗುತ್ತದೆ ಎಂಬುದನ್ನು ಮುಂದಾಗಿ ಕಂಡುಕೊಂಡನು. ಯಾಕೆಂದರೆ – **"ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು"** (1 ಪೇತ್ರ 2:24) ಎಂದು ಬರೆದದೆ. ದೇವರು ತನ್ನ ಸುವಾರ್ತಾ ಸಭೆಯನ್ನು ಪಿತ್ರಾರ್ಜಿತವಾದ, ವಾರಸುದಾರರಾಗಲು, ಅಶುದ್ಧತೆಯಿಲ್ಲದ, ನಿಷ್ಕಳಂಕವಾದ ಮತ್ತು ಎಂದೂ

ಬಾಡಿಹೋಗದ ಪರಲೋಕದಲ್ಲಿ ಕಾದಿರಿಸಲ್ಪಟ್ಟಿರುವ **"ಯೇಸು ಕ್ರಿಸ್ತನ ಜೊತೆ ವಾರಸುದಾರಿಕೆ"**ಗೆ ಕರೆಯುವ ತನ್ನ ಉದ್ದೇಶವನ್ನು ಮುಂಚಿತವಾಗಿ ತಿಳಿದಿದ್ದನು ಹಾಗೂ ಮುಂಚಿತವಾಗಿಯೇ ಅದರ ವ್ಯವಸ್ಥೆಮಾಡಿದ್ದನು. ಈ ಪೂರ್ವ ವ್ಯವಸ್ಥಿತ ಯೋಜನೆಯ ದೃಷ್ಟಿಕೋನದಲ್ಲಿ ಈ ವರ್ಗಕ್ಕೆ ಒಳಗೊಂಡವರೊಡನೆ ಪ್ರವಾದಿಗಳು ಮುಂಚಿತವಾಗಿ 'ಕ್ರಿಸ್ತನ ಸಹೋದರರೆಂದು' ಮಾತನಾಡಿದ್ದಾರೆ. ಪ್ರವಾದನೀಯವಾಗಿ ನಮ್ಮ ಕರ್ತನು ತನ್ನ ತಂದೆಗೆ **"ನಾನು ನಿನ್ನ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು. ಸಭಾ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು"** (ಕೀರ್ತನೆ 22:22, ಇಬ್ರಿಯ 2:12) ಎಂದು ಹೇಳುವವನಾಗಿದ್ದಾನೆ. ನಮ್ಮ ಕರ್ತನು ಈ ಲೋಕದ ವಿಮೋಚಕನು ಮಾತ್ರವೇ ಆಗಿರಬಾರದು, ಆತನು ತನ್ನೊಡನೆ ಜೊತೆ ವಾರಸುದಾರರಾಗಲಿರುವ 'ತನ್ನ ಸಹೋದರರಿಗೆ' ಮಾದರಿಯಾಗಿರಬೇಕು ಎಂಬುದು ದೇವರ ಕಾರ್ಯಯೋಜನೆಯಾಗಿರುವುದರಿಂದ – ಆ ಕಾರಣದಿಂದ ಆತನು ತನ್ನೆಲ್ಲ ಪರೀಕ್ಷೆಗಳು ಮತ್ತು ಅನುಭವದಲ್ಲಿ 'ತನ್ನ ಸಹೋದರರಂತೆ ಮಾಡಲ್ಪಡುವುದು' ಈ ದೈವಿಕ ಕಾರ್ಯಕ್ರಮದಲ್ಲಿ ಉಚಿತವಾಗಿದೆ.

## "ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪಮಾತ್ರ ಮಾಡಲಿಲ್ಲ" (ಇಬ್ರಿಯ 4:15)

## "He was Tempted in all points like as we are, yet without sin" - Heb 4:15

ನಮ್ಮ ಕರ್ತನು ಈ ಲೋಕದವರಂತೆ ಎಲ್ಲಾ ವಿಷಯಗಳಲ್ಲಿಯೂ ಶೋಧನೆಗೆ ಒಳಗಾದನು ಎಂಬುದಾಗಿ ಈ ಹೇಳಿಕೆಯು ಹೇಳುತ್ತಿಲ್ಲ, ಆದರೆ ಆತನ ಅನುಯಾಯಿಗಳಾದ ನಾವು ಶೊಧನೆಗೊಳಗಾಗು ವಂತೆಯೇ ಆತನೂ ಒಳಗಾದನು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಆತನು ಈ ಲೋಕದ ತಂದೆತಾಯಿಗಳಿಂದ ವಂಶಪಾರಂಪರ್ಯವಾಗಿ ಪಡೆದ ಪಾಪಮಯವಾದ ನೀತಿಭ್ರಷ್ಟ ಆಕಾಂಕ್ಷೆಗಳಿಗೆ ತುತ್ತಾಗಲಿಲ್ಲ : ಆದರೆ ಆತನು ಪವಿತ್ರನೂ, ನಿರುಪದ್ರವಿಯೂ, ನಿಷ್ಕಳಂಕನೂ, ಪಾಪಿಗಳಿಂದ ತನ್ನನ್ನು ಪ್ರತ್ಯೇಕಿಸಿಕೊಂಡವನೂ ಆಗಿರುವುದರಿಂದ, ಈ ಸುವಾರ್ತಾಯುಗದ ತನ್ನ ಅನುಯಾಯಿಗಳಂತೆ ಶೋಧನೆಗೆ ಒಳಗಾದನು – ಅವರುಗಳು ತಮ್ಮ ದೇಹದ ಇಚ್ಛಾನುಸಾರ ಜೀವಿಸದೆ, ಆತ್ಮನಿಗನುಸಾರವಾಗಿ ಜೀವಿಸುವವರಾಗಿದ್ದಾರೆ. ಅವರುಗಳು ತಮ್ಮ ದೇಹದ ದೌರ್ಬಲ್ಯಗಳಿಗನುಸಾರವಾಗಿ ಅಲ್ಲ, ತಮ್ಮ ಮನಸ್ಸಿನ ಆತ್ಮಕ್ಕನುಸಾರವಾಗಿ, ಅವರ ನೂತನ ಚಿತ್ತಕ್ಕನುಸಾರವಾಗಿ, ನೂತನ ಹೃದಯಕ್ಕನುಸಾರವಾಗಿ ನಿರ್ಣಯಸಲ್ಪಡು ವವರಾಗಿದ್ದಾರೆ – ರೋಮಾ. 8:04, 2 ಕೊರಿ. 5:16; ಯೋಹಾನ 8:15.

ನಮ್ಮ ಕರ್ತನು ಅರಣ್ಯದಲ್ಲಿ ಶೋಧನೆಗಳಿಗೊಳ ಗಾದುದರಲ್ಲಿ ಇದು ಸ್ಪಷ್ಟವಾಗಿ ತೋರಿಬರುತ್ತದೆ. ಇದು ಯೋರ್ದನ್‍ನಲ್ಲಿ ನಡೆದ ಆತನ ದೀಕ್ಷಾಸ್ನಾನ ಮತ್ತು ಪ್ರತಿಷ್ಠೆಗಳನ್ನು ತಕ್ಷಣದಲ್ಲಿ ಅನುಸರಿಸಿತು – ಮತ್ತಾಯ 4:1–11.

(1) ಮೊದಲನೆಯದಾಗಿ, ಆಗತಾನೇ ಆತನು ಯೋರ್ದಾನಿನಲ್ಲಿ ಪಡಕೊಂಡ ದೇವರ ಶಕ್ತಿಯನ್ನು ತನಗಾಗಿ ಬಳಸಿಕೊಂಡು ಕಲ್ಲುಗಳನ್ನು ರೊಟ್ಟಿಗಳನ್ನಾಗಿ ಮಾಡಬೇಕೆಂಬ ಸೈತಾನನಿಂದ ಬಂದ ಪ್ರಲೋಭನೆ. ಇದು ವಂಶಪಾರಂಪರ್ಯವಾದ ಅಥವಾ ಅಸಮರ್ಪಕತೆಯ ಸಂಬಂಧಿಸಿದ ಯಾವ ಮಟ್ಟದ ಸುಳಿವಿನಲ್ಲಿ ಕಂಡುಬರುವ ಪ್ರಲೋಭನೆಯಲ್ಲ. ನಮ್ಮ ಕರ್ತನು ನಾಲ್ವತ್ತು ದಿನಗಳವರೆಗೆ ಆಹಾರವಿಲ್ಲದೇ ದೇವರ ಯೋಜನೆಯನ್ನು ಅಧ್ಯಯನ ಮಾಡುವವನಾಗಿದ್ದನು. ಆತನು ಆಗತಾನೇ ಪಡೆದ ಪವಿತ್ರಾತ್ಮನ ಜ್ಞಾನೋದಯದ ಬೆಳಕಿನಲ್ಲಿ ಆತನು ಈ ಲೋಕಕ್ಕೆ ಬಂದ ಮಹಾ ಗುರಿಯ ನೆರವೇರಿಕೆಗೆ ಅಂದರೆ ಲೋಕದ ವಿಮೋಚನೆಗೆ ತನ್ನ ಮುಂದಿನ ಜೀವಿತ ಹೇಗಿರಬೇಕೆಂದು ನಿರ್ಧರಿಸ ಬಯಸುವವನಾಗಿದ್ದನು. ಆತನ ಮೇಲೆ ಅನುಗ್ರಹಿಸಲ್ಪಟ್ಟ ಮತ್ತು ಆತನು ಅದು ತನ್ನ ವಶದಲ್ಲಿರುವುದೆಂದು ಗ್ರಹಿಸಿರುವ ಆತ್ಮೀಕ ಶಕ್ತಿಯನ್ನು ಉಪಯೋಗಿಸಬೇಕೆಂಬ ಸಲಹೆಯು ಮೊದಲಿನ ಆಲೋಚನೆಗೆ ಸಮಂಜಸವೆಂದು ತೋರಿಬರುತ್ತದೆ. ಆದರೆ ನಮ್ಮ ಕರ್ತನು ಅಂಥಾಃ ಉಪಯೋಗಿಸುವಿಕೆಯು ಅದರ ದುರುಪಯೋಗ ವಾಗುತ್ತದೆ, ಉದ್ದೇಶಿತ ಕಾರ್ಯಕ್ಕಾಗಿ ಕೈಗೊಳ್ಳುವ ಉಪಯೋಗವಾಗುವುದಿಲ್ಲ ಎಂಬುದನ್ನು ತಕ್ಷಣದಲ್ಲಿ ಗ್ರಹಿಸಿಕೊಂಡನು, ಈ ಕಾರಣದಿಂದ ಆತನು ಆ ಸಲಹೆಯನ್ನು ತಿರಸ್ಕರಿಸುತ್ತಾ **"ಮನುಷ್ಯರು ಆಹಾರಮಾತ್ರದಿಂದಲ್ಲ, ಕರ್ತನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆ"** (ಮತ್ತಾಯ 4:4) ಎಂಬ ಧರ್ಮಶಾಸ್ತ್ರದ ಮಾತುಗಳನ್ನು ಹೇಳುವವನಾಗಿದ್ದಾನೆ. ಕರ್ತನ 'ಸಹೋದರರುಗಳಿಗೆ' ಕೆಲವೊಮ್ಮೆ ಆತ್ಮೀಕ ವರಗಳನ್ನು ಪ್ರಾಪಂಚಿಕ ಹಿತಾಸಕ್ತಿಗಳಿಗಾಗಿ ಉಪಯೋಗಿಸುವಂತೆ ಇದೇ ತೆರನಾದ ಪ್ರಲೋಭನೆ ವಿರೋಧಿಯಿಂದ ಉಂಟಾಗುವುದುಂಟು. ಇಂಥಾಃ ಸಲಹೆಗಳು ವಿಶ್ವಾಸಘಾತಕವಾದವುಗಳು ಮತ್ತು ದೇವರಿಂದ ಪ್ರತಿಷ್ಠೆಗೊಂಡ ವ್ಯಕ್ತಿಗಳು ವಿರೋಧಿಯಿಂದ ದೇವರ ಆಶೀರ್ವಾದಗಳನ್ನು ಆಗಾಗ್ಗ್ಯೆ ಹೆಚ್ಚುಹೆಚ್ಚಾಗಿ ದುರುಪಯೋಗಪಡಿಸಿಕೊಂಡು ಮಾರ್ಗತಪ್ಪುವಂತೆ ಮಾಡುವ ಮಾರ್ಗಗಳಾಗಿವೆ.

(2) ನಮ್ಮ ಕರ್ತನಿಗೆ ವಿರೋಧಿಯು ನೀಡಿದ ಮತ್ತೊಂದು ಸಲಹೆಯೆಂದರೆ ಆತನ ನಿಯೋಗವನ್ನು ಫಕೀರ ಪದ್ಧತಿಯಲ್ಲಿ ಜನರಿಗೆ ಪರಿಚಯಿಸುವುದು – ಆತನು ದೇವಾಲಯದ ಶಿಖರದ ತುದಿಗೇರಿ ಅಲ್ಲಿಂದ ಕೆಳಗೆ ದುಮುಕಬೇಕು. ಆಗ ಆತನಿಗೆ ಯಾವ ಹಾನಿಯೂ ಆಗದಿರುವುದನ್ನು ಕಾಣುವ ಜನಸಮೂಹಕ್ಕೆ ಆತನೊಬ್ಬ ಮಾನವಾತೀತ ಶಕ್ತಿಯೆಂಬುದು ರುಜುವಾತಾಗುತ್ತದೆ ! ಮತ್ತು ತಕ್ಷಣದಲ್ಲಿಯೇ ಅವರು ಆತನೇ ಮೆಸ್ಸಿಯನು ಎಂದು ಅರಿತು ಆತನನ್ನು ಅಂಗೀಕರಿಸಿಕೊಳ್ಳುತ್ತಾರೆ ಹಾಗೂ ಆತನ ಮುಂದಿರುವ ಕಾರ್ಯಗಳಲ್ಲಿ ಆತನೊಡನೆ ಸಹಕರಿಸುತ್ತಾರೆ! ಆದರೆ ನಮ್ಮ ಕರ್ತನಿಗೆ ತಕ್ಷಣದಲ್ಲಿ ಅಂಥಾಃ ಪದ್ಧತಿಯು ದೈವಿಕ ವ್ಯವಸ್ಥೆಯೊಂದಿಗೆ ಸಂಪೂರ್ಣವಾಗಿ ಸಾಮರಸ್ಯವಾಗಿರುವುದಲ್ಲ ಎಂಬ ಅರಿವಾಗುತ್ತದೆ. ಸೈತಾನನು ದೇವರ ವಾಕ್ಯವನ್ನು ತಪ್ಪಾಗಿ (ಬಹುಶಃ ತಪ್ಪಿನ ಪರವಾಗಿ) ಇಲ್ಲಿ ಅನ್ವಯಿಸಿದ್ದು ಸಹಾ ಆತನನ್ನು ನೀತಿವಂತಿಕೆಯು ತತ್ವಗಳಿಂದ ವಿಚಲಿತಗೊಳಿಸಲಿಲ್ಲ. ಆತನು ಕೂಡಲೇ ಸೈತಾನನಿಗೆ ಉತ್ತರಿಸಿ ಹೇಳಿದ್ದೇನೆಂದರೆ ಅಂಥಾಃ ಪ್ರಯತ್ನವು ದೈವೇಚ್ಛೆಯನ್ನೇ ಪ್ರಲೋಭಿಸುವುದಾಗುತ್ತದೆ ಮತ್ತು ಇದು ಸಂಪೂರ್ಣವಾಗಿ ಅಯುಕ್ತವಾಗಿದೆ ಮತ್ತು ಒಂದು ಕ್ಷಣಕ್ಕೂ ಯೋಚಿಸಬಾರದು ಎಂಬುದಾಗಿ. ಕರ್ತವ್ಯದ ಕರೆ ಬಂದಾಗ ಅಥವಾ ಅಪಾಯ ಬಂದಾಗ ಪ್ರಭುವು ಅದಕ್ಕೂ ಹಿಂಜರಿಯುವುದಿಲ್ಲ. ಆದರೆ ಎಲ್ಲಾ ಹಿತವನ್ನು ಕಾಪಾಡುವ ತಂದೆಯ ಸಾಮರ್ಥ್ಯವನ್ನು ಆತನು ಗ್ರಹಿಸುತ್ತಾನೆ; ಆದರೆ ಕರ್ತನ ಮೇಲಿರುವ ನಿಜವಾದ ಭರವಸವೆಂದರೆ, ದೇವರ ಆಜ್ಞೆಯಿಲ್ಲದೆ, ಕೇವಲ ತೋರಿಕೆಗಾಗಿ ಅಥವಾ ಬಡಾಯಿ ಕೊಚ್ಚಿಕೊಳ್ಳುವ ಸಲುವಾಗಿ ಅಜಾಗರೂಕವಾಗಿ ಗಂಡಾತರವೊಂದಕ್ಕೆ ಮೈಯೊಡ್ಡುವುದಲ್ಲ.

ಕರ್ತನ ಸಹೋದರರಿಗೆ ಈ ದೆಸೆಯಲ್ಲಿಯೂ ಕೂಡ ಪ್ರಲೋಭನೆಗಳು ಉಂಟಾಗುತ್ತವೆ. ಅಂಥವರು ಅವರ ರಕ್ಷಣಾ ನಾಯಕನು ನೀಡಿರುವ ಈ ಪಾಠವನ್ನು ಮತ್ತು ಉದಾಹರಣೆಯನ್ನು ನೆನಪಿನಲ್ಲಿಟ್ಟುಕೊಳ್ಳುವ ಅಗತ್ಯವಿದೆ. ಆಜ್ಞಾಪನೆಯಿಲ್ಲದೆ ಗಂಡಾಂತರಕ್ಕೆ ನುಗ್ಗಿ ನಾವು ಕರ್ತನ ಸದಭಿಪ್ರಾಯಕ್ಕೆ ಪಾತ್ರರಾದ ಶಿಲುಬೆಯ ಧೀರ ಸೈನಿಕರು ಎಂಬುದನ್ನು ತೋರಿಸಲು ಪ್ರಯತ್ನಿಸಬಾರದು. ಪಿಶಾಚನ ಮಕ್ಕಳಿಗೆ ಹುಚ್ಚು ಸಾಹಸ ಕಾರ್ಯಗಳು ಅನುಚಿತವಾದುದು ಎಂದು ಬಹುಶಃ ತೋರಿಬರಲಾರದು. ಆದರೆ ಅವುಗಳು ದೇವರ ಮಕ್ಕಳಿಗೆ ತೀರಾ ಅಯೋಗ್ಯವಾದವುಗಳು. ಎರಡನೆಯವರಿಗೆ ಒಂದು ಯುದ್ಧಸ್ಥಿತಿಯಿದೆ. ಅದಕ್ಕೆ ಇನ್ನೂ ಹೆಚ್ಚಿನ ಧೈರ್ಯ ಬೇಕಾಗುತ್ತದೆ. ಈ ಲೋಕವು ಶ್ಲಾಘಿಸಲಾರದ ಸಂಗತಿಗಳನ್ನು ಮಾಡುವಂತೆ ಅವರಿಗೆ ಕರೆನೀಡಲಾಗುವುದು. ಅವರು ಅದನ್ನು ಮೆಚ್ಚಿಕೊಳ್ಳುವುದು ಸಹಾ ಇಲ್ಲ, ಆದರೆ ಆಗಾಗ್ಗೆ ಕಿರುಕುಳಕೊಡುತ್ತಾರೆ. ಅವರು ಅಪಮಾನವನ್ನೂ ಮತ್ತು ಈ ಲೋಕದ ಧಿಕ್ಕಾರವನ್ನೂ ಸಹಿಸುವಂತೆ ಕರೆನೀಡಲಾಗಿದೆ; ಹೌದು, ಅವರು ಹೃದಯದ ಸುನ್ನತಿ ಇಲ್ಲದವರಂತೆ ಇರಲು ಬಯಸುತ್ತಾರೆ. ಕ್ರಿಸ್ತನ ನಿಮಿತ್ತ ನಿಂದಿಸಿ ಹಿಂಸೆಪಡಿಸಿ ಎಲ್ಲಾ ರೀತಿಯ ಕೆಟ್ಟ ಕೆಟ್ಟ ಮಾತುಗಳನ್ನು ಹೊರಿಸುತ್ತಾರೆ. ಈ ವಿಷಯದಲ್ಲಿ ನಮ್ಮ ರಕ್ಷಣಾ ನಾಯಕನ ಹಿಂಬಾಲಕರು ಅವರ ನಾಯಕನು ನಡೆದ ಹಾದಿಯಲ್ಲಿಯೇ ಆತನ ಹೆಜ್ಜೆಜಾಡಿಗನುಸಾರವಾಗಿ ನಡೆಯಬೇಕಾಗುತ್ತದೆ. ಸಾಮಾನ್ಯ ಜನರಿಗೆ ಅಚ್ಚರಿಯನ್ನುಂಟುಮಾಡಿ ಅವರನ್ನು ಮೆಚ್ಚಿಸುವ ದೊಡ್ಡ ಮತ್ತು ಅದ್ಭುತವಾದ ಸಾಹಸಕಾರ್ಯಗಳನ್ನು ಮಾಡುವುದಕ್ಕಿಂತ ಸದಭಿಪ್ರಾಯವಿಲ್ಲದ ದೇವರ ಸೇವೆಯಲ್ಲಿ ಅಪಮಾನ ಮತ್ತು ನಾಚಿಕೆಗೇಡನ್ನು ನಿರ್ಲಕ್ಷಿಸಲು ಬಹಳ ಧೈರ್ಯ ಬೇಕಾಗುತ್ತದೆ.

ಈ ಇಕ್ಕಟ್ಟಾದ ಮಾರ್ಗದಲ್ಲಿ ಸ್ವಚಿತ್ತಕ್ಕೆ ವಿರೋಧವಾಗಿ ನಡೆಯುವವರ ಒಂದು ಮುಖ್ಯವಾದ ಕಾದಾಟವೆಂದರೆ, ಅವರು ತಮ್ಮ ಸ್ವಯಿಚ್ಛೆಗಳನ್ನು ಪರಲೋಕದ ತಂದೆಯ ಚಿತ್ತಕ್ಕೆ ಅಧೀನವಾಗುವಂತೆ ಮಾಡಿ ಅಲ್ಲಿ ತಮ್ಮನಿರಿಸಿಕೊಳ್ಳುವುದು; ಸರ್ವಸಂಪೂರ್ಣನಾದ ವ್ಯಕ್ತಿಗೂ ಸ್ವಭಾವಿಕವಾಗಿ ಪುಟಿದೇಳುವ ತಮ್ಮ ಸ್ವಂತ ಆಕಾಂಕ್ಷೆಗಳನ್ನು ಹತ್ತಿಕ್ಕಿ ತಮ್ಮ ಸ್ವಂತ ಹೃದಯಗಳನ್ನು ಆಳುವುದು; ಹೊತ್ತಿ ಉರಿಯ ಈ ಬೆಂಕಿಯನ್ನು ಶಮನಗೊಳಿಸಿ, ತಮ್ಮ ದೇಹಗಳನ್ನು ಮತ್ತು ಈ ಲೋಕದ ಹಿತಾಸಕ್ತಿಗಳನ್ನು ದೇವರ ಸೇವೆಗೂ ಮತ್ತು ಆತನ ನಿಮಿತ್ತವಾಗಿ ಸಜೀವ ಯಜ್ಞಗಳನ್ನಾಗಿ ಸಮರ್ಪಿಸುವುದು. ಈ ಪರೀಕ್ಷೆಗಳಲ್ಲಿ ನಮ್ಮ ಕರ್ತನು ವಿಜಯವನ್ನೂ ಮತ್ತು ಅದರ ಜಯಮಾಲೆಯನ್ನು ಸಂಪಾದಿಸಿದ್ದಾನೆ ಮತ್ತು ಇವುಗಳು ಆತನ ಸಹೋದರರಿಗೆ ಸಂಭವಿಸುವ ಪರೀಕ್ಷೆಗಳೂ ಆಗಿವೆ. **"ತನ್ನನ್ನು ಆಳುವವನು** (ತನ್ನ ಸ್ವಂತ ಚೈತನ್ಯವನ್ನು ಸಂಪೂರ್ಣವಾಗಿ ದೇವರ ಚಿತ್ತಕ್ಕೆ ಅಧೀನ ಪಡಿಸುವವನು) **ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಟ"** (ಜ್ಞಾನೋಕ್ತಿ 16:32). ತನಗೆ ಪೂರ್ಣ ನಂಬಿಕೆ ಇರುವುದೆಂಬ ತಪ್ಪು ಕಲ್ಪನೆಯಿಂದ ದೇವಾಲಯದ ಶಿಖರದಿಂದ ಹಾರುವವನಿಗಿಂತಲೂ ಅಥವಾ ಬೇರೆ ಯಾವುದೋ ಮೂರ್ಖ ಕೆಲಸವನ್ನು ಮಾಡುವವನಿಗಿಂತಲೂ ಆತನು ಶ್ರೇಷ್ಟ. ದೇವರಲ್ಲಿನ ನಿಜವಾದ ನಂಬಿಕೆಯು ಕಣ್ಣುಮುಚ್ಚಿಕೊಂಡು ಸುಲಭವಾಗಿ ನಂಬುವುದಾಗಲೀ, ದೈವೇಚ್ಛೆಗೆ ಅನುಸಾರವಾದ ತನ್ನ ಪಾಲನೆಯ ಬಗ್ಗೆ ವೈಪರೀತ್ಯವಾದ ನಂಬುವಳಿಕೆಗಳನ್ನು ಹೊಂದಿರುವುದಾಗಲೀ ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ದೇವರು ಮಾಡಿರುವ ಎಲ್ಲಾ ಶ್ರೇಷ್ಟವೂ ಅಮೂಲ್ಯವೂ ಆದ ವಾಗ್ದಾನಗಳ ಮೇಲೆ ನಿಶ್ಚಲವಾದ ದೃಢವಿಶ್ವಾಸ, ಈ ಲೋಕದ, ದೇಹದ ಮತ್ತು ಪಿಶಾಚನ ವಿವಿಧ ಪ್ರಯತ್ನಗಳನ್ನು ಪ್ರತಿಭಟಿಸುವಂತೆ, ಅವುಗಳು ಆತನ

ಗಮನವನ್ನು ಬೇರೆಡೆಗೆ ಸೆಳೆಯದಂತೆ ವಿಶ್ವಾಸಿಗಳನ್ನು ಶಕ್ತರನ್ನಾಗಿ ಮಾಡುವ ದೃಢ ನಂಬಿಕೆ. ಇವುಗಳು ನಮಗೋಸ್ಕರವಾಗಿಯೇ ದೈವಿಕ ಲೋಕದಲ್ಲಿ ಗುರುತುಮಾಡಲ್ಪಟ್ಟ ನಂಬಿಕೆ ಮತ್ತು ವಿಧೇಯತೆಗಳ ಹಾದಿಯನ್ನು ಅನುಸರಿಸುವಂತೆ ನಮ್ಮನ್ನು ನಡೆಸುತ್ತವೆ.

(3) ನಮ್ಮ ಕರ್ತನಿಗಾದ ಮೂರನೆಯ ಪ್ರಲೋಭನೆಯೆಂದರೆ ಆತನ ರಾಜ್ಯದ ತ್ವರಿತ ಹಾಗೂ ಜಯಪ್ರಧವಾದ ಸ್ಥಾಪನೆಯ ಸಲುವಾಗಿ ತನ್ನನ್ನು ಶ್ರಮೆ ಮರಣಗಳಿಗೆ, ಶಿಲುಬೆಗೆ ಒಪ್ಪಿಸಿಕೊಡದೆ ವಿರೋಧಿಯ ಶರತ್ತಿಗನುಸಾರವಾಗಿ ಈ ಲೋಕದ ಚಕ್ರಾಧಿಪತ್ಯಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವುದು. ಇದನ್ನು ವಿರೋಧಿಯು ಹಕ್ಕಿನಿಂದ ಕೇಳುತ್ತಾನೆ ಮತ್ತು ಆತನ ಈ ಕೇಳಿಕೆಯು ವಿವಾದಾಸ್ಪದವಾಗಿರಲಿಲ್ಲ. ಯಾಕೆಂದರೆ ಆತನು ಈ ಲೋಕದ ಮೇಲೆ ತನ್ನ ನಿಯಂತ್ರಣವನ್ನಿರಿಸಿಕೊಂಡಿದ್ದನು. ಹೀಗಾಗಿ ಆತನ ಸಹಕಾರದಿಂದ ನಮ್ಮ ಕರ್ತನು ಈ ಲೋಕದಲ್ಲಿ ಆರಂಭಿಸಲು ಬಂದ ನೀತಿವಂತರ ರಾಜ್ಯವೊಂದನ್ನು ಆ ಕೂಡಲೇ ಸ್ಥಾಪಿಸಬಹುದಿತ್ತು. ಸೈತಾನನ ಸೂಚನೆಯೇನಂದರೆ, ಆತನು ಈ ಲೋಕವನ್ನು ಪಾಪಕ್ಕೆ, ಅಂಧತ್ವಕ್ಕೆ. ಮೂಢನಂಬಿಕೆಗಳಿಗೆ, ತಿಳಿಗೇಡಿತನಕ್ಕೆ ಮುನ್ನಡೆಸುವಲ್ಲಿ ಆತನು ಆಯಾಸಗೊಂಡಿದ್ದಾನೆ, ಆದಕಾರಣ ಆತನು ಪತನಗೊಂಡ ಜನಾಂಗವನ್ನು ಮೇಲಕ್ಕೆತ್ತಲು ಸಹಾಯಮಾಡುವ ನಮ್ಮ ಕರ್ತನ ನಿಯೋಗದ ಬಗ್ಗೆ ಸಹಾನುಭೂತಿಯುಳ್ಳವನಾಗಿದ್ದಾನೆ. ಹೀಗಿದ್ದಾಗ್ಯೂ, ಆತನಿಗೆ ಬೇಕಾದುದು ಈ ಲೋಕದ ಮೇಲಿನ ನಿಯಂತ್ರದ ಪ್ರಭಾವ. ಆದುದರಿಂದ ನೀತಿಮಾರ್ಗಕ್ಕೆ ಈ ಲೋಕವನ್ನು ತಿರುಗಿಸಲು ಆತನು ಅಪೇಕ್ಷಿಸುವ ಕ್ರಯವೆಂದರೆ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಈ ಲೋಕದ ಪುನಃವಶದ ಆಶೀರ್ವಾದದಲ್ಲಿ ಆತನ ಸಹಕಾರ. ಅಂದರೆ ಯೇಸು ಈ ಲೋಕವನ್ನು ಅದರ ಪುನಃರಚನಾ ಸ್ಥಿತಿಯಲ್ಲಿ ಆತನನ್ನು (ಸೈತಾನನ್ನು) ಆಳುವಾತನೆಂದು ಮಾನ್ಯಮಾಡಬೇಕು – ಹೀಗಾಗುವಂತೆ ಕರ್ತನು ಆತನಿಗೆ ಗೌರವ ಸಲ್ಲಿಸಬೇಕು.

ಸೈತಾನನು ದೇವರ ರಾಜ್ಯದ ವಿರುದ್ಧ ದಂಗೆ ಏಳಲು ಕಾರಣ ತಾನೇ ಮಹೋನ್ನತನಾದ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಎಂಬ ಹಂಬಲವಾಗಿತ್ತು ಎಂಬುದನ್ನು ನಾವಿಲ್ಲಿ ನೆನಪುಮಾಡಿಕೊಳ್ಳಬೇಕು. (ಯೆಶಾಯ 14:14 ನೋಡಿರಿ). ಏದೇನಿನಲ್ಲಿ ನಮ್ಮ ಆದಿ ತಂದೆತಾಯಿಗಳ ಮೇಲೆ ಆತನ ಸಫಲಗೊಂಡ ಆಕ್ರಮಣಕ್ಕೆ ಇದುವೇ ಮುಖ್ಯವಾದ ಉದ್ದೇಶವಾಗಿತ್ತು ಎಂದು ನಾವು ಹೇಳುತ್ತೇವೆ. ಅವರನ್ನು ದೇವರಿಂದ ಬೇರೆಡೆ ತಿರುಗಿಸಬೇಕು ಇಲ್ಲವೇ ಅವರನ್ನು ಪ್ರತ್ಯೇಕಿಸಬೇಕು ಮತ್ತು ಅವರನ್ನು ತನ್ನ ದಾಸರನ್ನಾಗಿ ಮಾಡಿಕೊಳ್ಳಬೇಕೆಂದು ಅತನು ಬಯಸಿದನು. ಸೈತಾನನು ನರಳುತ್ತಾ ಗೋಳಾಡುವ ಪ್ರಜೆಗಳಿಗಿಂತ ಸಂತೋಷವುಳ್ಳ ಪ್ರಜೆಗಳ ಅರಸನಾಗಲು ಹೆಚ್ಚು ಇಷ್ಟಪಡುತ್ತಾನೆ ಎಂಬುದನ್ನು ನಾವು ಸುಲಭವಾಗಿ ಗ್ರಹಿಸಬಹುದು. ನಿತ್ಯಜೀವವನ್ನು ವಶಪಡಿಸಿಕೊಂಡಿರುವ ಪ್ರಜೆಗಳನ್ನು ಆತನು ಇಷ್ಟಪಡುತ್ತಾನೆ. ನಿತ್ಯಜೀವ ಮತ್ತು ನಿಜವಾದ ಸಂತೋಷ ಇವುಗಳು ದೇವರ ಧರ್ಮಶಾಸ್ತ್ರದೊಂದಿಗೆ ಸಾಮರಸ್ಯವಿಲ್ಲದೆ ಅಸಾಧ್ಯ ಎಂಬುದನ್ನು ಆತನು ಇನ್ನೂ ಗ್ರಹಿಸಿಕೊಂಡಂತೆ ಕಾಣುವುದಿಲ್ಲ. ಹೀಗಾಗಿ ಸೈತಾನನು ಒಂದನ್ನು ಹೊರತುಪಡಿಸಿ ಉಳಿದೆಲ್ಲಾ ವಿವರಗಳಲ್ಲಿ ತಾನೇ ಸುಧಾರಕನಾಗಬೇಕೆಂದು ಬಯಸಿದನು – ಆತನ ಮಹತ್ವಾಕಾಂಕ್ಷೆಯು ತಣಿಯಬೇಕು – ಆತನು ಅವರಲ್ಲಿ ಯಾವುದೇ ಅರಸರಿಗೆ ಕಡಿಮೆಯವನಾಗ ಬಾರದು. ಆತನು ಈಗಾಗಲೇ ಇಹಾಲೋಕಾಧಿಪತಿಯಲ್ಲವೇ? ಹಾಗೆಂದು ಪವಿತ್ರ ಬರಹಗಳಲ್ಲಿ ಅಂಗೀಕಾರವಾಗಿದೆಯಲ್ಲವೇ? (ಯೋಹಾನ 14:30, 12:31, 16:11, 2 ಕೊರಿ. 4:4 ಇವುಗಳನ್ನು ನೋಡಿರಿ). ಆತನು ಇಹಲೋಕಾಧಿಪತಿ ಯಾಗಲು ಯಾವುದೇ ದೈವಿಕ ನಿಯೋಗವನ್ನು ಪಡೆದಿದ್ದನೆಂದಲ್ಲ, ಆದರೆ ತಿಳಿಗೇಡಿತನ ಮತ್ತು ತಪ್ಪು ಪ್ರತಿನಿಧಿತ್ವಗಳಿಂದ ಅಂದರೆ ಸುಳ್ಳನ್ನು ಸತ್ಯವೆಂಬಂತೆ, ಕತ್ತಲನ್ನು ಬೆಳಕೆಂಬಂತೆ, ತಪ್ಪನ್ನು ಸರಿಯೆಂಬಂತೆ ಬಿಂಬಿಸಿ ಜನರಲ್ಲಿ ಗೊಂದಲವನ್ನುಂಟುಮಾಡಿ, ದಿಗ್ಭ್ರಮೆಯನ್ನುಂಟು ಮಾಡಿ, ಅವರನ್ನು ತನ್ನ ವಶಕ್ಕೆ ತೆಗೆದುಕೊಂಡು, ಪ್ರಪಂಚದ ಕಣ್ಣುಕಟ್ಟಿಸಿ ಆತನು ಈ ಲೋಕದ ಪ್ರಭುತ್ವವನ್ನು ವಹಿಸಿಕೊಂಡಿದ್ದಾನೆ. ಆತನು ಸುಲಭವಾಗಿ ಈ ಲೋಕದ ಒಡೆಯನೂ ಅಥವಾ ದೇವರೂ ಆಗಿಬಿಟ್ಟಿದ್ದಾನೆ ಮತ್ತು ಹೆಚ್ಚು ಸಂಖ್ಯೆಯಲ್ಲಿರುವ ಅವಿಧೇಯ ಮಕ್ಕಳ ಹೃದಯವನ್ನು ಆಳುವವನಾಗಿದ್ದಾನೆ.

ಆದುದರಿಂದ, ಸೈತಾನನ ಈ ನಿರ್ಧಿಷ್ಟ ಸಲಹೆಯಲ್ಲಿನ ವಿಲಕ್ಷಣವಾದ ಪ್ರಲೋಭನೆಯು, ಅದು ಆತನ ಪಾಪದ ಸಮಸ್ಯೆಯಿಂದ ಮಾನವರನ್ನು ಉದ್ಧರಿಸಲು ನೂತನ ಪರಿಹಾರವೊಂದನ್ನು ನೀಡುತ್ತದೆ ಎಂಬಂತೆ ತೋರಿಬರುತ್ತಿದೆ. ಇದಕ್ಕೂ ಹೆಚ್ಚಾಗಿ ಅದು ಸೈತಾನನಲ್ಲಿ ಕನಿಷ್ಟಪಕ್ಷ ಭಾಗಶಃ ಪಶ್ಚಾತ್ತಾಪವನ್ನುಂಟು ಮಾಡುತ್ತಿದೆ ಮತ್ತು ಆತನು ಪುನಃ ನೀತಿವಂತಿಕೆಯ ಮಾರ್ಗಕ್ಕೆ ಹಿಂತಿರುಗುತ್ತಾನೆ ಎಂಬ ಅರ್ಥವನ್ನು ಮೂಡಿಸುವಂತೆ ಕಂಡುಬರುತ್ತಿದೆ. ಆದರೆ ಇದು ಆತನಿಗೆ ಪ್ರಜೆಗಳ ಮೇಲೆ ಅವರು ಆತನ ಭ್ರಮೆ ಹಾಗೂ ಪಾಪದ ದಾಸತ್ವದಲ್ಲಿರುವಾಗಕ್ಕಿಂತ ಇನ್ನೂ ಹೆಚ್ಚು ಸಂತೋಷ ಮತ್ತು ಹೆಚ್ಚು ಅಭಿವೃದ್ಧಿಯಿಂದ ಅಧಿಕಾರ ನಡೆಸುವ ಆತನ ಮಹತ್ವಾಕಾಂಕ್ಷೆಯಲ್ಲಿ ನಿರಂತರವಾದ ಸಫಲತೆಯನ್ನುಂಟು ಮಾಡುವ ಶರತ್ತಿನ ಮೇರೆಗೆ. ಮಾನವರ ರಾಜನಿಷ್ಠೆಯನ್ನುಳಿಸಿಕೊಳ್ಳಲು ಆತನಿಗೆ ಇದ್ದುದು ಇದೊಂದೇ ಮಾರ್ಗ; ಯಾಕೆಂದರೆ ಮಾನವರು

ಪಾಪವನ್ನು ತಿರಸ್ಕರಿಸಿ, ಪವಿತ್ರತೆಯನ್ನು ಮೆಚ್ಚಿಕೊಳ್ಳುವ ಅನುಪಾತದಲ್ಲಿಯೇ ಅವರು ದೇವರನ್ನು ಆರಾಧಿಸುವ ಅನುಪಾತದ ಬಯಕೆಯೂ ಉಂಟಾಗುತ್ತದೆ.

ನಮ್ಮ ಕರ್ತನಾದ ಯೇಸುವು ಸ್ವಲ್ಪವೂ ಹಿಂಜರಿಯಲಿಲ್ಲ. ತನ್ನ ತಂದೆಯ ಜ್ಞಾನವು ಅತ್ಯುತ್ತಮವಾದ ಮತ್ತು ಅನುರೂಪವಾದ ಏಕೈಕ ಯೋಜನೆಯೊಂದನ್ನು ಅನುಸರಿಸುವುದಾಗಿದೆ ಎಂಬುದರಲ್ಲಿ ಆತನಿಗೆ ನಿಚ್ಚಳವಾದ ಭರವಸೆಯಿತ್ತು. ಆದುದರಿಂದ ಆತನು ಮಾಂಸ ಮತ್ತು ರಕ್ತವನ್ನು ಬಳಸಿಕೊಳ್ಳದಿರುವುದು ಮಾತ್ರವಲ್ಲ ವಿರೋಧಿಯೊಡನೆ ಲೋಕದ ಏಳಿಗೆಯ ಸಹಕಾರಕ್ಕಾಗಿ ಚೌಕಾಶಿಮಾಡಲಿಲ್ಲ.

ಇಲ್ಲಿಯು ಸಹಾ ಕರ್ತನ 'ಸಹೋದರ'ರೊಡನೆ ಸೈತಾನನ ವಿಶೇಷ ಆಕ್ರಮಿಸುಕೊಳ್ಳುವಿಕೆಗಳಲ್ಲಿ ಒಂದನ್ನು ನೋಡುತ್ತೇವೆ. ಆತನು ನಾಮಕಾವಸ್ಥೆ ಸಭೆಯನ್ನು ಅದರ ಜೀವನ ಯಾತ್ರೆಯ ಆರಂಭದಲ್ಲಿಯೇ ಆಮಿಷ ಒಡ್ಡಿ ಲೋಕದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವ ಇಕ್ಕಟ್ಟಾದ ಮಾರ್ಗವಾದ ಕ್ರೂಜೆಯ ಮಾರ್ಗವನ್ನು ತೊರೆಯುವ ಹಾಗೂ ನಾಗರೀಕ ಅಧಿಕಾರದೊಂದಿಗೆ ಒಂದು ಒಕ್ಕೂಟಕ್ಕೆ ಪ್ರವೇಶಿಸುವಂಥಃ ಮತ್ತು ಈ ರೀತಿಯಲ್ಲಿ ಕ್ರಮೇಣವಾಗಿ ಈ ಲೋಕದ ರಾಜಕೀಯದಲ್ಲಿ ಪ್ರಭಾವಶಾಲಿಗಳನ್ನಾಗಿ ಮಾಡಬಲ್ಲ ಶೋಧನೆಯೊಂದಕ್ಕೆ ಒಳಪಡಿಸುವುದನ್ನು ನಾವು ನೋಡುತ್ತೇವೆ. ಇಹಲೋಕಾಧಿಪತಿಯೊಡನೆ ಸಹಕರಿಸುವುದರಿಂದ, ಆತನಿಂದ ರಹಸ್ಯವಾಗಿ ಪ್ರೋತ್ಸಾಹಗೊಂಡು, ಸಹಾಯಹೊಂದಿಕೊಂಡ ಒಬ್ಬ ಪ್ರತಿನಿಧಿಯಾದ ಪೋಪನ ಮೂಲಕ ಈ ಲೋಕದಲ್ಲಿ ಅದು ಕ್ರಿಸ್ತನ ರಾಜ್ಯವನ್ನು ಸ್ಥಾಪಿಸಲು ಬಯಸುತ್ತದೆ. ಯಾಕೆಂದರೆ, ಆತನನ್ನು ಅದು ಕ್ರಿಸ್ತನ ಪ್ರತಿಹಸ್ತಕನೆಂದು ಹೇಳಿಕೊಳ್ಳುತ್ತದೆ. ಇದರಿಂದ ಯಾವ ರೀತಿಯ ವಿನಾಶಕಾರಿ ಫಲ ಉಂಟಾಯಿತೆಂದು, ಈ ನಕಲಿ ರಾಜ್ಯವು ಸೈತಾನನ ಕಾರ್ಯಗಳಿಂದ ಯಾವ ರೀತಿಯಲ್ಲಿ ನಿಜವಾಗಿಯೂ ಪಿಶಾಚನ ರಾಜ್ಯವಾಗಿದೆ ಎಂದು ನಾವು ನೋಡಿದ್ದೇವೆ. ನಾವು ಅಂಧಕಾರದ ಯುಗದಲ್ಲಿನ ಫಲಿತಾಂಶಗಳನ್ನು ನೋಡಿದ್ದೇವೆ. ಕರ್ತನು ಈ ಪದ್ಧತಿಯನ್ನು 'ಕ್ರಿಸ್ತವಿರೋಧಿ*'ಯೆಂದು ಹೆಸರಿಸಿದ್ದಾನೆ (*ಸಂಪುಟ 2 ಅಧ್ಯಾಯ 9ನ್ನು ನೋಡಿರಿ).

ಸುಧಾರಣೆಯು ದಿಟ್ಟತನದಿಂದಲೇ ಆರಂಭ ಗೊಂಡಿತಾದರೂ, ವಿರೋಧಿಯು ಪುನಃ ಅದೇ ಪ್ರಲೋಭನೆಗಳನ್ನು ಸುಧಾರಕರುಗಳ ಮುಂದೆಯೂ ಇತ್ತನೆಂದು ನಾವು ಕಂಡುಕೊಳ್ಳುತ್ತೇವೆ. ಆದಕಾರಣ ಅವರು ಕೇವಲ ಭಾಗಶಃ ವಿರೋಧವನ್ನು ಮಾತ್ರವೇ ವ್ಯಕ್ತಪಡಿಸಿದರು. ಅವರು ಈ ಲೋಕದ ರಾಜ್ಯಗಳನ್ನು ಕಾಪಾಡಿಕೊಳ್ಳುವ ಮತ್ತು ಅವುಗಳ ಸಹಾಯಾರ್ಥದ ಸಲುವಾಗಿ ಹಾಗೂ ಈ ಲೋಕದ ರಾಜ್ಯಗಳು ಯಾವುದಾದರೊಂದು ರೀತಿಯಲ್ಲಿ ನಮ್ಮ ಕರ್ತನ ರಾಜ್ಯಗಳಾಗುತ್ತವೆ ಎಂಬ ನಿರೀಕ್ಷೆಯೊಡನೆ ಸತ್ಯದೊಂದಿಗೆ ಹೊಂದಾಣಿಕೆ ಮಾಡಿಕೊಂಡರು. ಆದರೆ ಪ್ರೊಟೆಸ್ಟಾಂಟ್ ಸಭೆಯಲ್ಲಿ ಕಂಡುಬರುವಂತೆ ಸಭೆ ಮತ್ತು ಈ ಲೋಕದ ರಾಜ್ಯಗಳ ಸಂಯೋಜನೆಯು ಪೋಪನ ಸಂಯೋಜನೆಗಿಂತ ಕಡಿಮೆ ಹಾನಿಕಾರಕವೆಂದು ಕಂಡು ಬರಬಹುದಾದಾಗ್ಯೂ ಅದು ಸಹಾಃ ಬಹಳ ಹಾನಿಕಾರಕವಾಗಿದೆ ಮತ್ತು ಇದರ ಪ್ರಭಾವಕ್ಕೆ ಒಳಗಾದವರಿಗೆ ಅಡಚಣೆಯನ್ನುಂಟುಮಾಡುವುದಾಗಿದೆ. 'ಸಹೋದರರು'ಗಳಿಗೆ ಈ ಪ್ರಲೋಭನೆಯಲ್ಲಿ ಗೆದ್ದು ಬರಲು ನಿರಂತರ ಘರ್ಷಣೆಗೊಳಗಾಗಿ ಮತ್ತು ಕ್ರಿಸ್ತನು ನಮಗೆ ಮುಕ್ತವಾಗಿ ನೀಡಿದ ಸ್ವಾತಂತ್ರ್ಯದಲ್ಲಿ ಈ ಲೋಕದವರಂತಲ್ಲದೆ ದೃಢ'ವಾಗಿ ನಿಲ್ಲಲು ಪ್ರತ್ಯೇಕವಾಗಿರುವುದನ್ನು ನಾವು ನೋಡುತ್ತೇವೆ.

ಇದಕ್ಕೂ ಹೆಚ್ಚಾಗಿ, ಇದೇ ರೀತಿಯ ಪ್ರಲೋಭನೆಯು ಎಲ್ಲಾ 'ಸಹೋದರ'ರುಗಳಿಗೂ ಬರುವುದಾದರೂ, ಇದು ಕಾಲದಿಂದ ಕಾಲಕ್ಕೆ ಸ್ವಲ್ಪ ಸುಧಾರಿತ ರೀತಿಯಲ್ಲಿ ಬರುವುದಾಗಿದೆ ಎಂದು ನಾವು ನೋಡುತ್ತೇವೆ. ಮಹಾ ವಿರೋಧಿಯು ಬಹಳ ಕಪಟದಿಂದ ಕರ್ತನಿಗೆ ಮಾಡಿದಂತೆ ನಮಗೂ ಎಲ್ಲಾ ಸಂಗತಿಗಳಲ್ಲಿಯೂ ಮಾಡಲು ಪ್ರಯತ್ನಿಸುತ್ತಾನೆ. ಉದಾಹರಣೆಗಾಗಿ ಆತನು ತಾನು ಪ್ರತಿಪಾದಿಸುವ ಸುಧಾರಣೆಯ ನಾಯಕನೋ ಎಂಬಂತೆ ಮತ್ತು ಈ ಲೋಕದ ಆಶೀರ್ವಾದಕರ ಕಾರ್ಯಗಳ ಬಗ್ಗೆ ಹೃತ್ಪೂರ್ವಕವಾದ ಸಹಾನುಭೂತಿಯುಳ್ಳವನಂತೆ ತನ್ನನ್ನು ತೋರ್ಪಡಿಸಿಕೊಳ್ಳುತ್ತಾನೆ. ಈ ದೆಸೆಯಲ್ಲಿ ಆತನ ಇತ್ತೀಚಿನ ಸಲಹೆಯು 'ಸಾಮಾಜಿಕ ಏಳಿಗೆ'ಯ ರೂಪದಲ್ಲಿ ಕಂಡುಬರುತ್ತದೆ. ಇದನ್ನು ಆತನು ಅನೇಕ 'ಸಹೋದರ'ರುಗಳ ಮನಸ್ಸಿನಲ್ಲಿ ಯಶಸ್ವಿಯಾಗಿ ಹುಟ್ಟುಹಾಕುತ್ತಾನೆ. ಈಗ ಆತನು ನೀಡುವ ಸಲಹೆಯೆಂದರೆ, ಶಿಲುಬೆಯ ಮಾರ್ಗವಾದ 'ಇಕ್ಕಟ್ಟಾದ ಮಾರ್ಗದಲ್ಲಿ' ನಡೆಯುವುದು ಒಂದು ಸಮಯದಲ್ಲಿ ಎಷ್ಟು ಅವಶ್ಯವಿತ್ತಾದರೂ, ಅದರ ಅವಶ್ಯಕತೆ ಇನ್ನು ಮುಂದೆ ಇರುವುದಿಲ್ಲ. ನಾವೀಗ ಸಮಗ್ರ ಪ್ರಸ್ತಾಪವನ್ನು ಸುಲಭವಾಗಿ ಮತ್ತು ತ್ವರಿತವಾಗಿ ನೆರವೇರಿಸಬಹುದು ಮತ್ತು ಲೋಕವು ಈಗ ಸಾಮಾನ್ಯವಾಗಿ ಸಾಮಾಜಿಕ, ಬೌದ್ಧಿಕ, ನೈತಿಕ ಮತ್ತು ಧಾರ್ಮಿಕ ನೆಲೆಯ ಉನ್ನತವಾದ ಸ್ಥಾನದಲ್ಲಿ ನಿಂತಿದೆ ಮುಂತಾಗಿ. ಆದರೆ ಆತನು ಸಲಹೆ ನೀಡುವ ಯೋಜನೆಗಳು ಸದಾ ಆತನೊಂದಿಗೆ ಸಂಯೋಜಿಸ ಲ್ಪಟ್ಟಿರುತ್ತವೆ; ಪ್ರಸ್ತುತ ಸಂಧರ್ಭದಲ್ಲಿ ಸಾಮಾಜಿಕ ಏಳಿಗೆ ಮತ್ತು ರಾಜಕೀಯ ಚಳುವಳಿಗಳಲ್ಲಿನ ಸುಧಾರಣೆಯಲ್ಲಿ ಜೊತೆ ಕೆಲಸದವರಾಗಿರುವವರೆಲ್ಲರೂ ಸಾಮಾಜಿಕ ಮತ್ತು ರಾಜಕೀಯವನ್ನು ಚಳುವಳಿಗಳನ್ನು ಸೇರಬೇಕು ಎಂಬುದು

ಆತನ ಸಲಹೆಯಾಗಿರುತ್ತದೆ. ಇದು ಆತನು ಅಪೇಕ್ಷಿಸುವ ಅಂತ್ಯಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ಈ ದೆಸೆಯಲ್ಲಿ ಆತನು ಹೆಚ್ಚಿನ ಜನರ ಬೆಂಬಲದ ಬಗ್ಗೆ ಬಹಳಷ್ಟು ಧೈರ್ಯಶಾಲಿಯೂ, ಪೂರ್ಣ ಭರವಸವುಳ್ಳವನೂ ಆಗಿರುತ್ತಾನೆ ಮತ್ತು ಇನ್ನುಮುಂದೆ ವ್ಯಕ್ತಿಗಳು ತಮ್ಮ ವ್ಯಕ್ತಿಗತ ವಿಶ್ವಾಸದ ಮೂಲಕ ಮತ್ತು ಕರ್ತನಾದ ಯೇಸುವಿಗೆ ತಮ್ಮನ್ನು ಪ್ರತಿಷ್ಠಿಸಿಕೊಳ್ಳುವುದರ ಮೂಲಕ ಪಾಪದಿಂದ ಪರಿವರ್ತನೆ ಪಡಕೊಳ್ಳುವ, ಮತ್ತು ಖಂಡನೆಯಿಂದ ರಕ್ಷಣೆಹೊಂದಿಕೊಳ್ಳುವ ಹಾಗೂ ತಂದೆಯೊಡನೆ ರಾಜಿ ಸಂಧಾನ ಮಾಡಿಕೊಳ್ಳುವ ಪರವಾಗಿ ತಾನಿದ್ದೇನೆಂದು ಸೋಗುಹಾಕುವ ಅವಶ್ಯಕತೆ ಅವನಿಗಿರುವುದಿಲ್ಲ. ಆತನ ಅಭಿದಾನವು ಸಮಾಜಿಕ ಏಳಿಗೆಯಾಗಿದ್ದು ಇದು ವ್ಯಕ್ತಿಗತವಾದ ಜವಾಬ್ದಾರಿಗಳನ್ನೂ ಪಾಪಗಳನ್ನು ನಿರ್ಲಕ್ಷಿಸುತ್ತದೆ ಮತ್ತು ಕೇವಲ ಸಮಾಜಿಕ ಸ್ಥಿತಿಯನ್ನು ಗೌರವಿಸುತ್ತದೆ ಮತ್ತು ಸಮಾಜವನ್ನು ಬಾಹ್ಯವಾಗಿ ಸ್ವಚ್ಛಗೊಳಿಸುತ್ತದೆ. "ತನ್ನ ಮೂಲಕ ಬರುವವರು ಮಾತ್ರವೇ ದೇವರ ಮಕ್ಕಳೆನಿಸಿಕೊಳ್ಳುತ್ತಾರೆ ಮತ್ತು ತನ್ನ ಸಹೋದರರೆನಿಸಿಕೊಳ್ಳುತ್ತಾರೆ" ಎಂಬ ಕರ್ತನ ಬೋಧನೆಗಳನ್ನು ನಾವು ತಾತ್ಸಾರ ಮಾಡುವಂತೆ ಮಾಡಿಬಿಡುತ್ತಾನೆ. ಬದಲಾಗಿ "ಎಲ್ಲಾ ಮಾನವರೂ ಸಹೋದರರುಗಳು ಮತ್ತು ದೇವರು ಇಡೀ ಮಾನವ ಜನಾಂಗದ ತಂದೆ. ಕ್ರೋಧದ ಮಕ್ಕಳು ಯಾರೂ ಇಲ್ಲ ಮತ್ತು ನಿಮ್ಮ ತಂದೆ ಪಿಶಾಚನು ಎಂದು ಕರ್ತನು ಹೇಳಿದನೆಂಬ ಮಾತುಗಳು ಕ್ರಿಸ್ತೀಯವಾದುವುಗಳಲ್ಲ, ಔದಾರ್ಯವುಳ್ಳವುಗಳಲ್ಲ ಬದಲಾಗಿ ಅವುಗಳು ಪಾತಕತನದವುಗಳು" ಎಂದು ನಾವು ನಂಬುವಂತೆ ಆತನು ಮಾಡುತ್ತಾನೆ. ಈ ರೀತಿಯಲ್ಲಿ ಆತನು ಸದಾ ನಿರ್ಧಿಷ್ಟವಾದ ಮಾತುಗಳಲ್ಲಿ ಹೇಳದೆ ಮಾನವರು ಪಾಪದಲ್ಲಿ ಬಿದ್ದವರು ಎಂಬುದನ್ನು ಪಾಪ ನಿವೃತ್ತಿಯ ಕಾರ್ಯವೂ ಸೋಗಿನ, ಕಪಟದ ವಾರ್ತೆಯೆಂಬಂತೆ ನಿರ್ಲಕ್ಷಿಸುವಂತೆ ಮಾಡುತ್ತಾನೆ. ಪಾಪ ನಿವಾರಣೆಗೆ ಈಡುಬಲಿಯನ್ನು ಅದೇ ರೀತಿಯಲ್ಲಿ **"ದೇವರ ಪಿತೃತ್ವ ಮತ್ತು ಮಾನವನ ಸಹೋದರತ್ವ"** ಎಂಬ ಸುವರ್ಣ ನಿಯಮವನ್ನು ನಿರ್ಲಕ್ಷಿಸುವಂತೆ ನಿರಾಕರಿಸುವಂತೆ ಮಾಡುತ್ತಾನೆ.

'ಸಹೋದರರು'ಗಳ ಮುಂದೆ ವಿರೋಧಿಯ ಈ ಪ್ರಲೋಭನೆಯು ಅನೇಕರನ್ನು ಮೋಸಗೊಳಿಸುತ್ತಿದೆ ಮತ್ತು ಬಹುಶಃ ಇದು 'ದೇವರಾದುಕೊಂಡವರನ್ನು' ಹೊರತುಪಡಿಸಿ ಉಳಿದೆಲ್ಲವರನ್ನೂ ಸಹಾ ಬಲು ಬೇಗನೆ ಮೋಸಗೊಳಿಸಲಿದೆ (ಮತ್ತಾಯ 24:24 ನೋಡಿರಿ). ಈ ದೇವರಾದುಕೊಂಡವರು ತಮ್ಮ ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯುವವರಾಗಿದ್ದು, ವಿರೋಧಿಯ ಸಲಹೆಗಳನ್ನು ಕೇಳದೆ ಕೇವಲ ಕರ್ತನ ಮಾತನ್ನು ಕೇಳುವವರಾಗಿದ್ದಾರೆ. ಈ ದೇವರಾದುಕೊಂಡ ಸಹೋದರರು ತಮ್ಮ ಸ್ವಂತ ತಿಳುವಳಿಕೆಗಳಿಗೆ ಮತ್ತು ಸೈತಾನನ ಕುತರ್ಕಗಳ ಕಡೆಗೆ ವಾಲದೆ ಯೆಹೋವನ ಶ್ರೇಷ್ಠ ಜ್ಞಾನದ ಬಗ್ಗೆ ಹಾಗೂ ಬಹುಕಾಲದ ಆತನ ದೈವಿಕ ಯೋಜನೆಯ ಬಗ್ಗೆ ವಿಶ್ವಾಸವುಳ್ಳವರಾಗಿದ್ದಾರೆ. ಇವರೆಲ್ಲರೂ ದೇವರಿಂದ ಕಲಿತವರಾದುದರಿಂದ ಮತ್ತು ಪ್ರಸ್ತುತ ಕಾಲದ ಕಾರ್ಯವು ಕ್ರಿಸ್ತನಲ್ಲಿ 'ಸಹೋದರ'ರಾಗಿರುವವರ ಆಯ್ಕೆಯೆಂದೂ, ಅವರು ಪರೀಕ್ಷಿಸಲ್ಪಟ್ಟು ಅಂತಿಮವಾಗಿ ದೇವರರಾಜ್ಯದಲ್ಲಿ ಕರ್ತನೊಂದಿಗೆ ಅವರು ಮಹಿಮೆಹೊಂದಿ, ಅಬ್ರಹಾಮನ ಸಂತತಿ ಎನಿಸಿಕೊಂಡು ಈ ಲೋಕವನ್ನು ಆಶೀರ್ವದಿಸುವುದಾಗಿದೆ ಹಾಗೂ ಮುಂದಿನ ಯುಗದಲ್ಲಿ ಈ ಲೋಕದ ಬೌದ್ಧಿಕ, ನೈತಿಕ ಮತ್ತು ಪ್ರಾಕೃತಿಕ ಉದ್ಧಾರಕ್ಕಾಗಿ ಕರ್ತನ ಸೂಕ್ತಕಾಲವು ಬರಲಿದೆ ಎಂಬುದನ್ನೂ ತಿಳಿದವರಾಗಿದ್ದಾರೆ. ಆದುದರಿಂದ ದೇವರಿಂದ ಆದುಕೊಂಡವರಾದ ಇವರನ್ನು ಅವರ ನೀಚ ಶತ್ರುವಿನ ಯಾವುದೇ ಹೊರಗಿನ ತೋರಿಕೆಯ ಅಥವ ವಿತರ್ಕ ವಾದಗಳಿಂದ ಮೋಸಗೊಳಿಸಲು ಸಾಧ್ಯವಾಗದು. ಇದಲ್ಲದೆ, 'ಸಹೋದರರುಗಳು' ಆತನ ಕುಯುಕ್ತಿಗಳನ್ನು ತಿಳಿಯದವರೇನಲ್ಲ. ಯಾಕೆಂದರೆ ಈ ದೆಸೆಯಲ್ಲಿ ಅವರಿಗೆ ಮುಂಚಿತವಾಗಿಯೇ ಎಚ್ಚರಿಸಲಾಗಿದೆ ಮತ್ತು ಅವರು ಯೇಸುವಿನ ಕಡೆ ದೃಷ್ಟಿಯಿಟ್ಟು ನೋಡುವವರಾಗಿದ್ದಾರೆ. ಯಾಕೆಂದರೆ, ಆತನು ತನ್ನ ಸ್ವಯಂ ಬಲಿದಾನದ ಮೂಲಕ ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಮಾತ್ರವಲ್ಲ, ಆತನು ಅವರನ್ನು ಆತನ ಪ್ರಥಮ ಪುನರುತ್ಥಾನದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಿ ಆತನ ಉತ್ಕೃಷ್ಟವಾದ ಮಹಿಮೆಯಲ್ಲಿ ಪಾಲುದಾರರನ್ನಾಗಿ ಮಾಡಿ ಅವರಿಗೆ ಒದಗಿಸುವಾತನೂ ಆಗಿದ್ದಾನೆ.

'ಸಹೋದರ'ರುಗಳಿಗೆ ಯಾವ ರೀತಿಯ ಪ್ರಲೋಭನಾ ಆಂಶಗಳು ಇರುವವವೋ ಅಂಥಾಃ ಅಂಶಗಳೇ ನಮ್ಮ ಕರ್ತನ ಅವರ ನಾಯಕನ ಪ್ರಲೋಭನೆಗಳಲ್ಲಿಯೂ ಇದ್ದವು. **"ಆತನು ಎಲ್ಲಾ ವಿಷಯಗಳಲ್ಲಿಯೂ ನಮ್ಮ ಹಾಗೆಯೇ ಶೋಧನೆಗೆ ಗುರಿಯಾದನು"** ಮತ್ತು ಪ್ರಲೋಭನೆಗೆ ತುತ್ತಾದವರಿಗೆ ಹಾಗೂ ಆತನು ಕೊಡುವ ರೀತಿಯ ಸಹಾಯವನ್ನು ಪಡಕೊಳ್ಳಲು ಇಷ್ಟಪಡುವವರಿಗೆ ಯಾವ ರೀತಿಯಲ್ಲಿ ನೆರವಾಗಬೇಕೆಂಬುದು ಆತನಿಗೆ ತಿಳಿದಿದೆ. ಆತನು ಆ ಸಹಾಯವನ್ನು ಆತನ ವಾಕ್ಯಗಳ ಬೋಧನೆಯ ಮೂಲಕವಾಗಿ ಮತ್ತು ಅವುಗಳ ಮಿಗಿಲಾದ ಅಮೂಲ್ಯ ವಾಗ್ದಾನಗಳ ಮೂಲಕ ನೀಡುವವನಾಗಿದ್ದಾನೆ. ನಮಗೆ ವಂಶಪಾರಂಪರ್ಯವಾಗಿ ಬಂದಿರುವ ಬಲಹೀನತೆಗಳು ಕರ್ತನ ಪ್ರಲೋಭ'ನೆಯ ಭಾಗವಾಗಿರುವುದಿಲ್ಲ. ಆತನಿಗೆ ಕುಡುಕರ ದಾಹವಾಗಲೀ, ಕೊಲ್ಲುವ ಆವೇಗವಾಗಲೀ, ಕಳ್ಳನ ಧನಲೋಭವಾಗಲೀ ಇರಲಿಲ್ಲ. ಆತನು ಪವಿತ್ರನು, ನಿರುಪದ್ರವಿಯೂ, ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನೂ ಆಗಿದ್ದಾನೆ. ಅಂತೆಯೇ

ಆತನ 'ಸಹೋದರರುಗಳಿಗೆ' ಈ ರೀತಿಯ ಆಕ್ರಮಣಗಳ ಪ್ರಲೋಭನೆಗಳು ಉಂಟಾಗುವುದಿಲ್ಲ. ನಂಬಿಕೆ ಮತ್ತು ಪ್ರತಿಷ್ಠೆಯ ಮೂಲಕ, ಪವಿತ್ರಾತ್ಮವನ್ನು ಪಡಕೊಂಡು ಸ್ವೀಕರಿಸುವ ಮೂಲಕ ಆತನ ಸಹೋದರರುಗಳಾಗಿರುವವರು ಇತರರಿಗೆ ಹಾನಿಯನ್ನುಂಟು ಮಾಡುವ ಪ್ರವೃತ್ತಿಯನ್ನು ಕಳಕೊಂಡವರಾಗಿರುತ್ತಾರೆ. ಇದರ ಬದಲಾಗಿ ನೂತನ ಮನಸ್ಸನ್ನು ಅಂದರೆ ಕ್ರಿಸ್ತನ ಮನಸ್ಸನ್ನು, ಕ್ರಿಸ್ತನ ಆತ್ಮನನ್ನು – ಪ್ರೀತಿಯ ಆತ್ಮನನ್ನು ಪಡಕೊಂಡವರಾಗಿರುತ್ತಾರೆ: ಇದು ಮೊಟ್ಟಮೊದಲಿಗೆ ತಂದೆಯ ಚಿತ್ತವನ್ನು, ಎರಡನೆಯದಾಗಿ ಅವಕಾಶವಿರುವಾಗ ಎಲ್ಲರಿಗೂ, ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಒಳ್ಳೆಯದನ್ನು ಮಾಡ ಬಯಸುತ್ತದೆ – ಗಲಾತ್ಯ 6:10.

ನೂತನ ಮನಸ್ಸನ್ನು ಮತ್ತು ನೂತನ ಚಿತ್ತವನ್ನು ಹೊಂದಿಕೊಳ್ಳುವವರ ದೇಹದಲ್ಲಿ ವಂಶಪಾರಂಪರ್ಯವಾದ ಬಲಹೀನತೆಗಳು, ಮೋಹ ಮತ್ತು ಕಲಹಗಳ ಬಗೆಗಿನ ಧೋರಣೆಗಳು ಉಳಿದು ಕೊಳ್ಳುವುದಾದರೂ, ಅವರುಗಳು ಇದರ ವಿರುದ್ಧವಾಗಿ ನಿರಂತರವಾದ ಎಚ್ಚರಿಕೆ ವಹಿಸಬೇಕಾದ ಅಗತ್ಯತೆ ಇರುವುದಾದರೂ. ಕೆಲವೊಮ್ಮೆ ಅವರ ಚಿತ್ತಕ್ಕೆ ವಿರೋಧವಾಗಿ ತಪ್ಪು ಮಾಡಿದಾಗ್ಯೂ ಈ ಉದ್ದೇಶ ರಹಿತವಾದ ಬಲಹೀನತೆಗಳು ಅವರ ಪಾಪಗಳೆಂದು ಅಥವಾ 'ನೂತನ ಸೃಷ್ಟಿಗಳ' ಕಾರ್ಯಗಳೆಂದು ಪರಿಗಣಿಸಲ್ಪಡದೆ ಅವುಗಳು ಕೇವಲ ಹಳೆಯ ಸ್ವಭಾವದ ಕೊರತೆಗಳೆಂದು ಪರಿಗಣಿಸಲ್ಪಡುತ್ತವೆ. ಇವುಗಳನ್ನು ನೂತನ ಸೃಷ್ಟಿಗಳು ವಿರೋಧಿಸುವವರೆಗೂ ನಮ್ಮ ರಕ್ಷಣಾ ನಾಯಕನ ಮಹಾ ಪಾಪ ಪ್ರಾಯಶ್ಚಿತ್ತ ಬಲಿಯಾದ ಈಡುಬಲಿಯಿಂದ ಮುಚ್ಚಲ್ಪಟ್ಟಿವೆ ಎಂದು ಪರಿಗಣಿಸಲಾಗುವುದು. 'ನೂತನ ಸೃಷ್ಟಿ'ಯು ಮಾತ್ರವೇ ತೀರ್ಮಾನಿಸಲ್ಪಟ್ಟವನಾಗಿ ಪರೀಕ್ಷೆಗೆ ಒಳಪಡುವನು, ಯುಕ್ತನಾಗಿ ಹೊಳಪಿಸಲ್ಪಡುವನು ಮತ್ತು ಕ್ರಿಸ್ತನ ರಾಜ್ಯದಲ್ಲಿ ಆತನ ಜೊತೆ ವಾರಸುದಾರನಾಗಲು ಸಿದ್ಧಪಡಿಸಲ್ಪಡುವನೇ ಹೊರತು ಮಾಂಸ ದೇಹಧಾರಿಯಾಗಿ ಅಲ್ಲ, ಅವು ಸತ್ತದೆಂದು ಪರಿಗಣಿಸಲ್ಪಡುವುದು.

## ಕಷ್ಟಾನುಭವಗಳ ಮೂಲಕ ಸರ್ವಸಂಪೂರ್ಣರನ್ನಾಗಿ ಮಾಡುವುದು "Made Perfect through Sufferings"

**"ಸಮಸ್ತವೂ ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವುದು ಆತನಿಗೆ ಯುಕ್ತವಾಗಿತ್ತು"** (ಇಬ್ರಿಯ 2:10)

ಮೇಲಿನ ವಾಕ್ಯವನ್ನು ಮನಸ್ಸನಲ್ಲಿಟ್ಟುಕೊಂಡಾಗ ನಮ್ಮ ಕರ್ತನು ಅನುಭವಿಸಿದ ಕಷ್ಟಾನುಭವಗಳ ಮೂಲಕ ಒಬ್ಬ ಸರ್ವಸಂಪೂರ್ಣ ಮಾನವನಾಗಿ ಉಂಟುಮಾಡಲ್ಪಡಲಿಲ್ಲ ಅಥವಾ ಆತನು ಮಾನವನಾಗಿ ಬರುವ ಮೊದಲು ಯಾವ ಕಷ್ಟಾನುಭವವನ್ನೂ ಅನುಭವಿಸಲಿಲ್ಲ ಎಂಬುದನ್ನು ಸುಲಭವಾಗಿ ನೋಡ ಬಹುದಾಗಿದೆ. ಈ ದೇವರ ವಾಕ್ಯದ ಆಲೋಚನೆ ಏನೆಂದರೆ, ನಮ್ಮ ಕರ್ತನು ಈ ಲೋಕದಲ್ಲಿರುವಾಗ, ಆತನು ಮಾನವನಾಗಿ ಆಗಲೇ ಸರ್ವಸಂಪೂರ್ಣನಾಗಿರುವಾಗ, ದೇಹಧಾರಿಯಾದ ದೇವರ ಪ್ರತಿರೂಪನೂ, ಪವಿತ್ರನೂ, ನಿರುಪದ್ರವಿಯೂ, ನಿಷ್ಕಳಂಕನೂ, ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನೂ, ತನ್ನ ಅನುಭವ ಕಷ್ಟಾನುಭವಗಳ ಮೂಲಕ, ಮತ್ತೊಂದು ಪರಿಪಕ್ವತೆಯನ್ನು ಪಡೆದಾತನೂ ಆಗುತ್ತಾನೆ – ಇದು ಅದುವರೆಗೆ ಪಡೆದ ಮತ್ತೊಂದು ನೆಲೆಯ ಸಮರ್ಪಕತೆಯಾಗಿರುತ್ತದೆ. ಲೋಕವು ಉಂಟಾಗುವುದಕ್ಕಿಂತಾ ಮೊದಲು ವಾಕ್ಯವೆಂಬಾತನು (ಲೋಗಾಸ್) ತಂದೆಯ ಬಳಿಯಲ್ಲಿರುವಾಗ ಸಮರ್ಪಕನಾಗಿದ್ದನು – ಆತನು ಇರುವಿಕೆಯಲ್ಲಿ, ಹೃದಯದಲ್ಲಿ ಮತ್ತು ಚಿತ್ತದಲ್ಲಿ ಸಮರ್ಪಕನಾಗಿದ್ದನು ಮತ್ತು ತನ್ನ ತಂದೆಗೆ ಸಂಪೂರ್ಣ ನಿಷ್ಠಾವಂತನಾಗಿದ್ದನು ಎಂಬುದು ಮೊದಲನೆಯ ಸಂಗತಿ. ಮತ್ತೊಂದು ಸಂಗತಿಯೆಂದರೆ, ಆತನು ಸ್ವಯಿಚ್ಛೆಯಿಂದ ಮಾಂಸಧಾರಿಯಾಗಲು, ನಮ್ಮ ಕೆಳಮಟ್ಟದ ಸ್ವಭಾವವನ್ನು ಧರಿಸಿಕೊಳ್ಳಲು ಒಪ್ಪಿಕೊಂಡಾಗ, ಆತನು ಸಮರ್ಪಕನಾದ ಮನುಷ್ಯನಾಗಿದ್ದನು – ಪಾಪಿಗಳಿಂದ ತನ್ನನ್ನು ಪ್ರತ್ಯೇಕಿಸಿಕೊಂಡಿದ್ದನು; ಆದರೆ ಮೂರನೆಯ ಸಂಗತಿ ಸಹಾ ಉಂಟು. ಏನೆಂದರೆ, ಈಗ ಆತನ ಅತ್ಯುನ್ನತವಾದ ಸ್ಥಿತಿಯಲ್ಲಿಯೂ ಆತನು ಸರ್ವಸಂಪೂರ್ಣನಾಗಿದ್ದಾನೆ, ದೈವಸ್ವಭಾವದಲ್ಲಿ ಪಾಲುದಾರನಾಗಿದ್ದಾನೆ. ಈ ಕಡೆಯ ವಿಷಯಕ್ಕೆ ನಮ್ಮ ವಾಕ್ಯಭಾಗವು ಸಂಬಂಧಿಸಿದೆ. ಅಷ್ಟೊಂದು ಉನ್ನತವಾಗಿ, ದೈವ ಸ್ವಭಾವದ ಪ್ರಭಾವ, ಮಾನ ಮತ್ತು ನಿರ್ಲಯತ್ವದ ಅತ್ಯುನ್ನತ ಸ್ಥಾನದಲ್ಲಿದ್ದುಕೊಂಡು ದೇವರ ಜ್ಞಾನದಲ್ಲಿ ಕೆಲವೊಂದು ಪರೀಕ್ಷೆಗಳನ್ನು ಎದುರಿಸುವುದು ಸೂಕ್ತವೆಂದು ತಿಳಿದನು. ಇವನ್ನು ಸಂಧಿಸುವುದರ ಮೂಲಕ 'ದೇವರು ಪಡೆದ ಏಕಮಾತ್ರನು' ಎಂಬ ಬಿರುದನ್ನು ಸಾರ್ಥಕಗೊಳಿಸಿ, ದೇವರ ಕೃಪೆಯ ಎಲ್ಲಾ ವೈಭವದಲ್ಲಿ ಪಾಲುದಾರನಾದನು. ಹೀಗಾಗಿ ಎಲ್ಲಾ ಜನರೂ ತಂದೆಗೆ ಮಾನ ಕೊಡುವ ಪ್ರಕಾರವೇ ಮಗನಿಗೂ ಮಾನಬೇಕು.

ತಂದೆ ದೇವರಿಗೆ ಆತನ ವಿಧೇಯತೆಯನ್ನು ತೋರಿಸುವ ಈ ಪರೀಕ್ಷೆಗಳ ಸಂಬಂಧದಲ್ಲಿ ದೇವರ ವಾಕ್ಯದಲ್ಲಿ ಬರೆದಿರುವಂತೆ – **"ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡನು"** (ಇಬ್ರಿಯ 12:2) ಎಂಬುವ ಪ್ರಕಾರ ಆತನ ಮುಂದೆ

ಕೆಲವೊಂದು ಸಂತೋಷ, ಪ್ರತೀಕ್ಷೆಗಳು ಇದ್ದವು. ಆತನ ಮುಂದಿರುವ ಈ ಸಂತೋಷವನ್ನು ನಾವು ವಿವೇಚನಾ ಪೂರ್ವಕವಾಗಿ ಹೀಗೆಂದು ಭಾವಿಸಬಹುದು;

(1) ತಂದೆ ದೇವರಿಗೆ ಒಪ್ಪಿಗೆಯಾಗಬಹುದಾದ ಸೇವೆಯ ಸಂತೋಷ

(2) ಮಾನವ ಜಾತಿಯನ್ನು ವಿಮೋಚಿಸಿ ಅವರನ್ನು ಪಾಪ ಮತ್ತು ಮರಣಗಳಿಂದ ಪಾರುಮಾಡುವ ಸಾಧ್ಯತೆಯಲ್ಲಿನ ಸಂತೋಷ

(3) ವಿಮೋಚನೆಯ ನೆರವೇರಿಸುವಿಕೆಯಲ್ಲಿ ತಾನು ತಂದೆಯ ಎಣಿಕೆಯಲ್ಲಿ ಈ ಲೋಕದ ಒಬ್ಬ ಸಶಕ್ತ ಅರಸ, ಆಶೀರ್ವಾದದಾಯಕನಾದ ರಾಜ ಮತ್ತು ಯಾಜಕನಾಗುವೆನೆಂಬ ಸಂತೋಷ; ಲೋಕಕ್ಕೆ ದೈವ ಯೋಜನೆಯ ತಿಳುವಳಿಕೆಯನ್ನು ಬಹಿರಂಗಗೊಳಿಸುವುದು ಮತ್ತು ನೂತನ ಒಡಂಬಡಿಕೆಯ ಷರತ್ತುಗಳನ್ನು ಅಂಗೀಕರಿಸುವವರನ್ನು ಪಾಪದಿಂದ ದೈವಕೃಪೆಗೆ ಮೇಲೆತ್ತುವುದು ಇವುಗಳಲ್ಲಿರುವ ಸಂತೋಷ.

(4) ಪ್ರಪಂಚವು ನಿರ್ಮಾಣವಾಗುವುದಕ್ಕಿಂತ ಮುಂಚೆ ತಂದೆಯ ಬಳಿಯಲ್ಲಿ ಆತನಿಗಿದ್ದ ಆತ್ಮ ಸ್ವಾರೂಪ್ಯದ ಮಹಿಮೆಗೆ ಹಿಂತಿರುಗುವುದು ಮಾತ್ರವಲ್ಲ, ದೇವದೂತರಿಗಿಂತಲೂ, ರಾಜತ್ವಗಳಿಗಿಂತಲೂ ಮತ್ತು ಎಲ್ಲಾ ಅಧಿಕಾರಗಳಿಗಿಂತಲೂ, ಹೆಸರಿಸಲ್ಪಟ್ಟ ಎಲ್ಲಾ ಹೆಸರುಗಳಿಗಿಂತಲೂ ಶ್ರೇಷ್ಠವಾದ ಹೆಸರನ್ನು ಹೊಂದಿದವನಾಗಿ ಅತ್ಯುನ್ನತವಾದ ಸ್ಥಾನಕ್ಕೆ ಏರಿಸಲ್ಪಡುವುದು, ಮತ್ತು ವಿಶ್ವ ಸಾಮ್ರಾಜ್ಯದಲ್ಲಿ ತಂದೆಯ ಬಲಬದಿಯಲ್ಲಿ ಕುಳಿತುಕೊಳ್ಳುವುದು, ದೈವ ಸ್ವಭಾವದಲ್ಲಿ ಅದರ ಅಂತರ್ಜಾತವಾದ ಮತ್ತು ಅಮರತ್ವದ ಜೀವನದಲ್ಲಿ ಪಾಲುದಾರನಾಗುವುದು ಇವುಗಳಲ್ಲಿರುವ ಸಂತೋಷ.

ಆದರೆ ನಮ್ಮ ಕರ್ತನ ಮುಂದೆ ಇಡಲ್ಪಟ್ಟಿರುವ ಈ ಎಲ್ಲಾ ಸಂತೋಷಗಳು ದೇವರ ಚಿತ್ತಕ್ಕೆ ಆತನ ವಿಧೇಯತೆಯ ಮೇಲೆ ಆತುಕೊಂಡು ನೀಡಲಾಗಿವೆ. ನಿಜವಾಗಿಯೂ ಆತನು ಸದಾ ತನ್ನ ತಂದೆಗೆ ವಿಧೇಯನಾಗಿದ್ದನು ಮತ್ತು ತಂದೆಯ ಮಾರ್ಗದಲ್ಲಿ ಉಲ್ಲಾಸದಿಂದಿದ್ದನು. ಆದರೆ ಈ ಹಿಂದೆ ಎಂದೂ ಆತನು ಈ ರೀತಿಯ ಪರೀಕ್ಷೆಗಳಿಗೆ ಒಳಪಟ್ಟಿರಲಿಲ್ಲ. ಈವರೆಗೆ ತಂದೆಯ ಚಿತ್ತವನ್ನು ನೆರವೇರಿಸುವುದು ಉಲ್ಲಾಸಕರವೂ ಮತ್ತು ಗೌರವಾರ್ಹವೂ ಆಗಿತ್ತು. ಆದರೆ ಈಗ ಸಂಕಟ, ಯಾತನೆ ಹಾಗೂ ಅವಮಾನ ಮುಂತಾದ ದುಃಸ್ಥಿತಿಯುಳ್ಳವು ಹಾಗೂ ಇಂಥಾಃ ದುಃಸ್ಥಿತಿಯು ಆತನಿಗೆ ಅಂತ್ಯದಲ್ಲಿ ಕೇವಲ ಮರಣವನ್ನು ಮಾತ್ರವಲ್ಲ ಅವಮಾನಕರವಾದ ಶಿಲುಬೆಯ ಮರಣವನ್ನುಂಟು ಮಾಡುತ್ತದೆ. ಈ ಪರೀಕ್ಷೆಗಳನ್ನು ಆತನು ತೆಗೆದುಕೊಳ್ಳುತ್ತಾನೋ ಅಥವಾ ಇಲ್ಲವೋ ಎಂಬದಾಗಿತ್ತು. ಆತನು ಈ ಪರೀಕ್ಷೆಗಳನ್ನು ಎದುರಿಸಿದನು, ಎಂದೂ ತಡವರಿಸಲಿಲ್ಲ, ಎಂದಿಗೂ ಚಂಚಲನಾಗಲಿಲ್ಲ. ಆದರೆ ಪ್ರತಿಯೊಂದು ನಿರ್ಧಿಷ್ಟವಾದ ರೀತಿಯಲ್ಲಿ ತಂದೆಯ ನ್ಯಾಯ, ಪ್ರೀತಿ, ಜ್ಞಾನ ಮತ್ತು ಶಕ್ತಿಯನ್ನು ತನ್ನ ನಂಬಿಕೆಯನ್ನು ಪ್ರಕಟಿಸಿದನು ಮತ್ತು ಆತನ ವಿರೋಧವಾಗಿ ಪಾಪಿಗಳ ಎಲ್ಲಾ ವಿರೋಧಗಳನ್ನೂ, ವ್ಯತಿರಿಕ್ತತೆಗಳಲ್ಲಿ, ವಿರೋಧಿಯ ಇತರ ಆಕ್ರಮಣಗಳೊಂದಿಗೆ ಹಿಂಜರಿಯದೆ ಸಹಿಸಿಕೊಂಡನು. ಈ ರೀತಿಯಲ್ಲಿ ಆತನು ಅನೇಕ ಕಷ್ಟಾನುಭವಗಳ ಮೂಲಕ ಆತನ ಮುಂದಿಟ್ಟ ಎಲ್ಲಾ ಸಂತೋಷಗಳಿಗೆ ಸಮರ್ಪಕನಾದನು. ಇದರ ಪರಿಣಾಮವಾಗಿ ಆತನು ಅತ್ಯುನ್ನತ ಮಟ್ಟದಲ್ಲಿ ಅಂದರೆ 'ದೈವ ಸ್ವಭಾವ'ದಲ್ಲಿ ತನ್ನ ಬಿರುದಿಗೆ ತಕ್ಕಂತೆ ಸರ್ವಸಂಪೂರ್ಣತೆಯನ್ನು ಹೊಂದಿಕೊಂಡನು. ಈ ರೀತಿಯಲ್ಲಿ ಆತನು ನಿಜವಾಗಿಯೂ ದೇವರು ಪಡಕೊಂಡ ಏಕೈಕನಾಗಿ ಕಂಡುಬಂದನು :

**"ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತು ಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿ ಕಾಣಿಸಿಕೊಂಡವನಾಗಿ ತನಗೆ ವಿಧೇಯನಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು"**
(ಇಬ್ರಿಯ 5:8–10)

**"Though He were a son yet learned he obedience by the Things which he suffered. And being made Perfect He became The Author of Everlasting Salvation Unto all Them That Obey Him"** (Heb. 5:8-10)

ಈ ರೀತಿಯಲ್ಲಿ ನಮ್ಮ ಕರ್ತನು ಈಗಾಗಲೇ ನಿಷ್ಕಳಂಕನೂ, ಸರ್ವ ಸಂಪೂರ್ಣನೂ, ಈಗಾಗಲೇ ದೇವರ ಏಕಪುತ್ರನೂ, ಅನುಕೂಲಕರ ಸ್ಥಿತಿಯಲ್ಲಿ ಈಗಾಗಲೇ ತಂದೆಗೆ ವಿಧೇಯನೂ ಆಗಿರುವವನು, ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ವಿಧೇಯನಾಗಿರುವುದು ಹೇಗೆಂದು ಕಲಿತುಕೊಂಡನು. ಈ ರೀತಿಯಲ್ಲಿ ಆತನು ಪರೀಕ್ಷೆಗಳಿಗೆ ಒಳಪಟ್ಟವನಾಗಿ, ತಾನು ಅತ್ಯುನ್ನತ ಮಟ್ಟದಲ್ಲಿ, ದೈವಸ್ವಭಾವದ ಸಮರ್ಪಕತೆಗೆ ಅರ್ಹನೆಂದು ರುಜುವಾತುಪಡಿಸಿದನು ಮತ್ತು ಆತನನ್ನು ದೇವರು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾಗ, ಆತನ ಮುಂದೆ ಇಡಲ್ಪಟ್ಟ ಉತ್ಕೃಷ್ಟವಾದ ಮಹಿಮೆಗೆ ಮೊದಲಿಗೆ ಸಂಪೂರ್ಣ ಸಮರ್ಪಕನಾಗಿ, ಮತ್ತು ಆತನ ದೇಹವಾದ ಸಭೆಯ ವಿಮೋಚಕನಾಗಿ, ನಂತರದಲ್ಲಿ ತಕ್ಕಸಮಯದಲ್ಲಿ ಜ್ಞಾನದ ತಿಳುವಳಿಕೆ ಬಂದವರೆಲ್ಲರೂ ಆತನಿಗೆ ವಿಧೇಯರಾಗುವಂತೆ ಕಂಡುಬಂದನು.

ಇದಕ್ಕೂ, ಅಪೋಸ್ತಲನಾದ ಪೇತ್ರನ ಈ ಅರಿಕೆಗೂ

ಇರುವ ಸಾಮರಸ್ಯವನ್ನು ಗುರುತಿಸಿರಿ – **"ದೇವರು ಆತನನ್ನೇ ಇಸ್ರಾಯೇಲ್ ಜನರಿಗೆ ಮಾನಸಾಂತರವನ್ನೂ ಪಾಪಪರಿಹಾರವನ್ನೂ ದಯಪಾಲಿಸುವುದಕ್ಕಾಗಿ ನಾಯಕನೆಂತಲೂ ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು"** – ಅ.ಕೃ. 5: 31.

ಈ ರೀತಿಯಲ್ಲಿ ನಮ್ಮ ಕರ್ತನಾದ ಯೇಸುವು ತನ್ನ ತಂದೆಯ ಮುಂದೆಯೂ, ದೇವದೂತರುಗಳ ಮುಂದೆಯೂ ಮತ್ತು ಆತನ 'ಸಹೋದರರು'ಗಳಾದ ನಮ್ಮಗಳ ಮುಂದೆಯೂ ತಂದೆ ದೇವರಿಗೆ ಮತ್ತು ತನ್ನ ತಂದೆಯ ರಾಜ್ಯದ ತತ್ವ ಸಿದ್ಧಾಂತಗಳಿಗೆ ತನ್ನ ಸ್ವಾಮಿನಿಷ್ಠೆಯನ್ನು ನಿರೂಪಿಸಿದ್ದಾನೆ. ಹೀಗೆ ಆತನು ತಂದೆಯ ನಿಯಮಗಳನ್ನು ಉಜ್ವಲಗೊಳಿಸಿ ಅದನ್ನು ಗೌರವಾರ್ಹವನ್ನಾಗಿ ಮಾಡಿದ್ದಾನೆ. ಅದು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿಯೂ ಬಹಳಷ್ಟು ಮಿತಿಮೀರಿದ ಕೇಳಿಕೆಗಳಲ್ಲ, ಸಮರ್ಪಕ ವ್ಯಕ್ತಿಯ ಯೋಗ್ಯತೆಗೆ ಮೀರಿದ್ದಲ್ಲ ಎಂದು ನಿರೂಪಿಸಿದನು. ಆತನ ಅನುಯಾಯಿಗಳಾದ ನಾವು, ದೇವರ ವಿಧೇಯ ಮತ್ತು ಜ್ಞಾನವುಳ್ಳ ಸೃಷ್ಟಿಗಳಲ್ಲಿ ಸಂತೋಷಪಡುತ್ತಾ **"ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ, ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು"** (ಪ್ರಕಟನೆ 5:12) ಎಂದು ಸ್ತುತಿಸುವೆವು.

ಈ ರೀತಿ ಮಹಿಮೆಹೊಂದಿಕೊಳ್ಳುವ ನಮ್ಮ ಕರ್ತನು ರಕ್ಷಣಾ ನಾಯಕನಾಗಿರುವುದು, ಆ ರಕ್ಷಣಾ ನಾಯಕನ ಅನುಯಾಯಿಗಳಾದ ಶಿಲುಬೆಯ ಸೈನಿಕರಾಗಿರುವವರೆಲ್ಲರೂ ರಾಜ್ಯದಲ್ಲಿ ಆತನ ಜೊತೆ ವಾರಸುದಾರರಾಗಿದ್ದು, ಅದೇ ರೀತಿಯಲ್ಲಿ ಶೋಧನೆಗಳು ಮತ್ತು ಕಷ್ಟಾನುಭವಗಳನ್ನು ಅನುಭವಿಸುತ್ತಾ 'ನೂತನ ಸೃಷ್ಟಿಗಳಾಗಿ' 'ಸರ್ವ ಸಂಪೂರ್ಣ'ರಾಗಬೇಕೆಂಬ ಅರ್ಥನೀಡುತ್ತದೆ. ನಮ್ಮ ರಕ್ಷಣಾಕರ್ತನು ಅನುಭವಿಸಿದ ಕಷ್ಟಾನುಭವಗಳು ಸಮರ್ಪಕವಾಗಿದ್ದು, ನಮ್ಮಲ್ಲಿ ಆತನು ಈ ಲೋಕದ, ದೇಹದ ಹಾಗೂ ಪಿಶಾಚನ ವಿರೋಧಗಳನ್ನು ಸಹಿಸಿಕೊಂಡು, ತನ್ನ ಚಿತ್ತವನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಟ್ಟಂತೆಯೇ ನೂತನ ಸೃಷ್ಟಿಗಳಾದ ನಾವೂ ಮಾಡಬೇಕಾಗುತ್ತದೆ. ನಮ್ಮ ಕಷ್ಟಗಳು 'ನರಳುವ ಸೃಷ್ಟಿ'ಗಳು ಅನುಭವಿಸುವ ಸಾಮಾನ್ಯ ನೋವಿನ ಸಾಧಾರಣ ಸಂಕಟಗಳಲ್ಲ . ಅವನ್ನು ನಾವು ಸಹಾ ಈ ಲೋಕದ ಸದಸ್ಯರಾಗಿ ಸ್ವಲ್ಪಮಟ್ಟಿಗೆ ಅನುಭವಿಸುತ್ತೇವೆ. 'ನೂತನ ಸೃಷ್ಟಿಗಳ' ಬೆಳವಣಿಗೆಯಲ್ಲಿ ಎಣಿಸಲ್ಪಡುವ ಕಷ್ಟಾನುಭವವು ಕರ್ತನ ನಿಮಿತ್ತ ಮತ್ತು ಕರ್ತನ ವಾಕ್ಯಗಳ ನಿಮಿತ್ತ ಮತ್ತು ಕರ್ತನ ಜನರಿಗಾಗಿ ಅವರ ಸ್ವಯಂಪ್ರೇರಣೆಗನುಸಾರವಾಗಿ ಉಂಟಾಗುವವುಗಳಾಗಿವೆ – ಕರ್ತನ ಒಳ್ಳೆಯ ಸೈನಿಕರಾಗಿ ನಾವು ಸಹಾ ನಮ್ಮ ಸ್ವಂತ ಇಚ್ಛೆಗಳನ್ನು ಪೂರೈಸಲು ಬಯಸದೆ, ನಮ್ಮ ರಕ್ಷಣಾ ವೀರನ ಚಿತ್ತವನ್ನು ಪರಲೋಕದ ತಂದೆಗೆ ನಮ್ಮಲ್ಲಿ ಸಮರ್ಪಕಪಡಿಸಿಕೊಳ್ಳುವಂತೆ ಕಷ್ಟಗಳನ್ನು ಸಹಿಸಿಕೊಳ್ಳ ಬೇಕಾಗುತ್ತದೆ. ಈ ರೀತಿಯಲ್ಲಿ ನಾವು ಆತನ ಹೆಜ್ಜೆಜಾಡಿನಲ್ಲಿ ನಡೆಯುವವರಾಗಬೇಕು, ಆತನ ಎಚ್ಚರಿಕೆಯ ಪಾಲನೆಯನ್ನು ಗ್ರಹಿಸಬೇಕು, ಮತ್ತು ಆತನ ಪರಲೋಕದ ಕೃಪಾಸನದಲ್ಲಿ ಆತನ ಸಹಾಯಗಳನ್ನು ನಾವು ಪಡಕೊಳ್ಳುವಂತಾಗಬೇಕು. ಈ ಎಲ್ಲಾ ಸಂಗತಿಗಳೂ ಒಟ್ಟಾಗಿ ನಮ್ಮ ಒಳತಿಗಾಗಿ ಕಾರ್ಯವೆಸಗುತ್ತವೆ ಎಂದು ನಂಬುವವರಾಗಬೇಕು. ನಾವು ಸಹಿಸಬಹುದಾದ ಶೋಧನೆಗಳೆ ಹೊರತು ಸಹಿಸಲಾಗದ ಶೋಧನೆಗಳು ನಮಗೆ ಬರಲಾರವು ಮತ್ತು ಶೋಧನೆಗಳು ಬರುತ್ತವೇ ಅವುಗಳಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನೂ ಆತನೇ ಒದಗಿಸುತ್ತಾನೆ ; ಎಲ್ಲಾ ಶೋಧನೆಗಳಲ್ಲಿಯೂ ಆತನು ಪ್ರತಿ ಸಮಯಕ್ಕೆ ಅಗತ್ಯಕ್ಕೆ ಸಾಕಾಗುವಷ್ಟು ಕೃಪೆಯನ್ನು ನಮಗೆ ಅನುಗ್ರಹಿಸುತ್ತಾನೆ. ಅದೇ ರೀತಿಯಲ್ಲಿ ಶೋಧನೆಗೊಳಗಾದ ಆತನ 'ಸಹೋದರರುಗಳು' ಸಹಾ ಈಗ ಕ್ರಿಸ್ತನ ನೂತನ ಸೃಷ್ಟಿಗಳಂತೆ ಸರ್ವಸಂಪೂರ್ಣರಾಗುವರು – **"ಬೆಳಕಿನ ರಾಜ್ಯದೊಳಗೆ ದೇವಜನರ ಪಾಲುಗಾರರಾಗುವುದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡುವನು"** – ಕೊಲೊಸ್ಸೆ 1:12.

## ಪಾಪಮಯವಾದ ಮಾಂಸಧಾರಿ ಶರೀರದ ರೀತಿಯಲ್ಲಿ

## In the Likeness of Sinful Flesh

**"ಆದುದರಿಂದ ಕ್ರಿಸ್ತಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ಯಾಕೆಂದರೆ ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದ ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನಿನ ಮೂಲಕ ಬಿಡಿಸಿತು. ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡದೇ ಇತ್ತೋ [ಎಲ್ಲಾ ನರಭಾವದವರು ಬೀಳುವಿಕೆಯಿಂದ ಭ್ರಷ್ಟರೇ, ಹಾಗಾಗಿ ಸಂಪೂರ್ಣವಾಗಿ ಆಜ್ಞೆಗಳಿಗೆ ವಿಧೇಯತೆ ತೋರಲು ಅಸಮರ್ಥರು.] ಅದನ್ನು ದೇವರೇ ಮಾಡಿದನು. ಏನೆಂದರೆ ಆತನು ಪಾಪನಿವರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ (ಪಾಪದ ಆಳ್ವಿಕೆಯಲ್ಲಿ ಬಂದಂತೆ) ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ [ನಮ್ಮ ಶರೀರಕ್ಕನುಸಾರವಾಗಿ ನಡೆಯದೆ ಅತ್ಮಕ್ಕನುಸಾರವಾಗಿ ನಡೆಯುವವರಾಗಿ] ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವುದಕ್ಕೆ ಮಾರ್ಗವಾಯಿತು" – ರೋಮಾ. 8 :1–4.**

ನಮ್ಮ ಕರ್ತನನ್ನು ಪಾಪಿಯೆಂದು, ಪತನಗೊಂಡ

ಮಾನವ ಜನಾಂಗದ ಸದಸ್ಯನು ಎಂದು ಪರಿಗಣಿಸಲು ಹೆಚ್ಚುಕಡಿಮೆ ನಿರ್ಧರಿಸಿದವರು ತಮ್ಮ ವಿಚಾರಸರಣಿಯಲ್ಲಿ ಬೆಂಬಲಿಸುವಂತೆ ಈ ವಾಕ್ಯಭಾಗವನ್ನು ಘಟ್ಟಿಯಾಗಿ ಹಿಡುಕೊಂಡಿದ್ದರು ಮತ್ತು ಇದನ್ನು ವಿವೇಚನೆಯ ಸಾಮರಸ್ಯದಿಂದ ಮತ್ತು ಇತರ ದೇವರ ವಾಕ್ಯಗಳ ಸಾಮರಸ್ಯದಿಂದ ಹೊರಗಿಡುವ ಪ್ರಯತ್ನಮಾಡಿದರು; ಕ್ರಿಸ್ತನು **"ಪಾಪಮಯ** ಶರೀರ'ದಲ್ಲಿ ಕರಾರುವಕ್ಕಾಗಿ ಅದರಂತೆಯೇ ಉಂಟುಮಾಡಲ್ಪಟ್ಟನು, ಆದಾಮನು ಅವಿಧೇಯನಾಗುವ ಮೊದಲು ಇದ್ದಂತೆ ಪಾಪಮಾಡದ ಶರೀರದಲ್ಲಿ ಅಲ್ಲ ಎಂಬುದನ್ನು ಅವರು ರುಜುವಾತುಪಡಿಸ ಬೇಕೆಂದಿದ್ದರು. ಆದರೆ ಮೇಲ್ಕಂಡ ಪರಿಚ್ಛೇದದ ಪ್ರಕಾರ ಅಪೋಸ್ತಲನ ಆಲೋಚನೆಯು ಓದುಗರ ಮನದ ಮುಂದೆ ಬರುವುದೆಂದು ನಾವು ನಂಬುತ್ತೇವೆ. ನಮ್ಮ ಕರ್ತನು ತನ್ನ ಆತ್ಮೀಕ ಸ್ವಭಾವದ ಮಹಿಮೆಯನ್ನು ಬಿಟ್ಟುಕೊಟ್ಟು ಮಾಂಸದೇಹಧಾರಿಯಾದನು. ಆತನು ತಾನು ವಿಮೋಚಿಸಲು ಬಂದ ಜನಾಂಗದವರಂತೆಯೇ ಆದನು. ಆದಿ ತಂದೆಯಾದ ಆದಾಮನ ಅವಿಧೇಯತ್ವದ ನಿಮಿತ್ತ ಅವರ ಸ್ವಭಾವ ಮತ್ತು ದೇಹವು ಪಾಪದ ಬಂಧನಕ್ಕೆ ಒಳಗಾಗಿದ್ದು ಪಾಪಕ್ಕೆ ಮಾರಲ್ಪಟ್ಟದ್ದಾಗಿತ್ತು. ಭಾಷಾಂತರದಲ್ಲಿ ಅದಕ್ಕೆ ನೀಡಲ್ಪಟ್ಟ ಥಳಿಕಿನ ನಿರೂಪಣೆಯ ಹೊರತಾಗಿ ಬೇರೆ ಯಾವುದೂ ಇಲ್ಲಿ ನಮ್ಮ ಕರ್ತನು ಪಾಪಿಯಾಗಿದ್ದನು ಎಂದು ಹೇಳುವುದಿಲ್ಲ. ನಿಜವಾಗಿಯೂ ಇದು ಊಹಿಸಬಹುದಾದ ಬಹು ಸರಳವಾಗಿರುವ ಪ್ರಮೇಯವಾಗಿದ್ದು, ಆತನು ಪಾಪಿಯಾಗಿದ್ದರೆ, ಅಥವಾ ಮಾನವ ಕುಟುಂಬದ ಮೇಲೆ ಬಿದ್ದಿರುವ ಶಾಪದಲ್ಲಿ ಯಾವುದೇ ರೀತಿಯ ಭಾಗಿಧಾರಿಯಾಗಿದ್ದರೆ, ಆತನು ನಮ್ಮ ಪಾಪಗಳ ಪ್ರಾಯಶ್ಚಿತ್ತ ಬಲಿಯಾಗಲು ಸಾಧ್ಯವಿತ್ತಿಲ್ಲ. ಯಾಕೆಂದರೆ, ಒಬ್ಬ ಪಾಪಿಯು ಮತ್ತೊಬ್ಬ ಪಾಪಿಯ ಪಾಪಗಳ ಪ್ರಾಯಶ್ಚಿತ್ತ ಬಲಿಯಾಗಲು ಸಾಧ್ಯವಿಲ್ಲ. ದೇವರ ನಿಯಮದ ಪ್ರಕಾರ **"ಪಾಪದ ಸಂಬಳವು ಮರಣ"**. ನಮ್ಮ ಕರ್ತನು ಯಾವುದೇ ಅರ್ಥದಲ್ಲಿ ಇಲ್ಲವೇ ಯಾವುದೇ ಮಟ್ಟದಲ್ಲಿ ಪಾಪಿಯಾಗಿದ್ದರೆ, ತನ್ನ ಸ್ವಂತ ಪ್ರಾಣವನ್ನು ಮುಟ್ಟುಗೋಲಾಗಿಸಿಕೊಳ್ಳುತ್ತಿದ್ದನು ಮತ್ತು ಆದಾಮನಿಗಾಗಲೀ ಯಾವುದೇ ಪಾಪಿಗಾಗಲೀ ಆತನ ಈಡುಬಲಿಯ ಬೆಲೆಯು ನಿರರ್ಥಕವಾಗುತ್ತಿತ್ತು.

## "ನಮ್ಮ ಬೇನೆಗಳನ್ನು ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು"

(ಮತ್ತಾಯ 8:17)

**Himself took our Infirmities** (Matt. 8:17)

**"ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು; ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳಿಂದ ಆತನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಶಾಂತಿಯನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"**

(ಯೆಶಾಯ 53: 4,5)

'ದೌರ್ಬಲ್ಯತೆ'ಯು 'ಸಮರ್ಪಕತೆ'ಯ ವಿರುದ್ಧವಾಗಿದೆ. ನಮ್ಮ ಕರ್ತನಲ್ಲಿ ದೌರ್ಬಲ್ಯತೆಗಳು ಇದ್ದವು ಎಂಬ ಸತ್ಯವು ಆತನು ಅಸಮರ್ಪಕನಾಗಿದ್ದನು, ಆತನು ಪತನಗೊಂಡ ಜನಾಂಗದ ಕೆಲವು ದೋಷಗಳನ್ನು ಹೊಂದಿದ್ದನು ಎಂಬುದಕ್ಕೆ ರುಜುವಾತಾಗಿದೆ ಎಂದು ಕೆಲವರು ತರ್ಕಿಸಬಹುದು. ಗೆತ್ಸೆಮನೆತೋಟದಲ್ಲಿ ಆತನು ಮನೋವ್ಯಥೆಯುಳ್ಳವನಾಗಿ ಪ್ರಾರ್ಥಿಸುತ್ತಿದ್ದಾಗ ಆತನು ಬೆವರಿದನು. ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು (ಲೂಕ. 22:44) ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಕೆಲವು ವೈದ್ಯಕೀಯ ಅಧಿಕಾರಿಗಳು ಇದನ್ನು ಒಂದು ವಿಧವಾದ ಕಾಯಿಲೆ ಎಂದು ಗುರುತಿಸುತ್ತಾರೆ. ಇದು ಬಹಳ ಅಪರೂಪದ್ದಾಗಿದ್ದರೂ ಮನುಕುಲದ ಇತರ ಸಂತತಿಗೂ ಇದು ತಟ್ಟಬಹುದೆಂದು ತಿಳಿಯಲಾಗಿದೆ. ಅದು ನರಗಳನ್ನು ಬಲವಾಗಿ ತಿರುಚಿ ಬಲಹೀನತೆಯನ್ನು ಉಂಟುಮಾಡುವುದು ಎಂಬ ಮಾಹಿತಿಯನ್ನು ನೀಡಿದೆ ಮತ್ತು ಸಂಪ್ರದಾಯವಾಗಿ ಮತ್ತೆ ಹೇಳುವುದೇನೆಂದರೆ, ನಮ್ಮ ಕರ್ತನು ಗೊಲ್ಗಥಾದ ಮಾರ್ಗದಲ್ಲಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ಒತ್ತಾಯಪೂರ್ವಕವಾಗಿ ಹೋಗುವಾಗ ಆತನು ಆ ಭಾರವನ್ನು ಹೊರಲಾರದೆ ಮೂರ್ಛೆಗೊಂಡನು. ಆದಕಾರಣ ಕುರೇನೆ ಪಟ್ಟಣದ ಸೀಮೋನನೆಂಬುವವನನ್ನು ಶಿಲುಬೆ ಹೊರಲು ಅವರು ಬಿಟ್ಟೀಹಿಡಿದರು (ಮತ್ತಾಯ 27:32). ಮುಂದೆ ಶಿಲುಬೆಯ ಮೇಲೆ ನಮ್ಮ ಕರ್ತನ ಮರಣವು ಸಾಮಾನ್ಯವಾಗಿ ಸಂಭವಿಸುವುದಕ್ಕಿಂತ ಬೇಗನೇ ಸಂಭವಿಸಿತೆಂದು ನಾವು ನೋಡುತ್ತೇವೆ (ಮಾರ್ಕ 15:44). ಇದು ಆತನ ಹೃದಯವು ಅದರ ಮಾಂಸಖಂಡಗಳು ಬಿರಿಯುವಿಕೆಯಿಂದ ಅಕ್ಷರಶಃ ಒಡೆದು ಹೋದ ಕಾರಣ ಉಂಟಾಯಿತು. ಇದು ಆತನ ಪಕ್ಕೆಗೆ ಈಟಿಯಿಂದ ತಿವಿದಾಗ ಹೊರಟು ಬಂದ ರಕ್ತ ಮತ್ತು ನೀರಿನಿಂದ ತಿಳಿದುಬರುತ್ತದೆ (ಯೋಹಾನ 19:34). ಈ ಎಲ್ಲಾ ಘಟನೆಗಳಲ್ಲಿ ನಮ್ಮ ಕರ್ತನು ಮೊಟ್ಟಮೊದಲ ಸರ್ವಸಂಪೂರ್ಣ ಮಾನವನಾದ ಅದಾಮನಲ್ಲಿ ಪ್ರಕಟವಾದ ಸಂಪೂರ್ಣವಾದ ಸತ್ವವನ್ನು ಪ್ರಕಟಿಸಲಾಗಲಿಲ್ಲ. ಆದಾಮನ ಸತ್ವವು ಅಷ್ಟೊಂದು ಬಲಯುತವಾದುದರಿಂದಲೇ ಆತನು ಒಂಬೈನೂರ ಮೂವತ್ತು ವರ್ಷಗಳ ಕಾಲ ಜೀವಿಸುವುದು

ಸಾಧ್ಯವಾಯಿತು. ನಮ್ಮ ಕರ್ತನ ಈ ಎಲ್ಲಾ ಬಲಹೀನತೆಗಳು ಆತನು ಅಸಮರ್ಪಕನಾಗಿದ್ದನು ಎಂಬುದಕ್ಕೆ ಪುರಾವೆಗಳಾಗಿವೆಯೋ? ವಂಶಪಾರಂಪರ್ಯ ವಾಗಿಯೋ?, ಇಲ್ಲವೇ ಬೇರೊಂದು ರೀತಿಯಲ್ಲಿ ಆತನು ಸಮರ್ಪಕ ಮಾನವನ ಶಕ್ತಿಯನ್ನು ಕಳಕೊಂಡವನಾಗಿ, ಕುಂದುಕೊರತೆಯುಳ್ಳವನಾಗಿ ಕಂಡು ಬರುವನಲ್ಲವೋ? ಎಂಬ ಪ್ರಶ್ನೆಗಳು ಇಲ್ಲಿ ಉದ್ಭವಿಸುತ್ತದೆ.

ಮೇಲ್ನೋಟಕ್ಕೆ ಈ ಪ್ರಸ್ತಾಪವು ಇಂಥಾಃ ತೋರಿಕೆಯನ್ನು ಹೊಂದಿದೆ. ದೇವರ ವಾಕ್ಯದ ಮಾರ್ಗದರ್ಶನದಲ್ಲಿ ಮಾತ್ರವೇ ನಮ್ಮ ಮನಸ್ಸುಗಳಿಗೆ ಅಥವಾ ಇತರರಿಗೆ ತೃಪಿಕರವಾಗುವ ರೀತಿಯಲ್ಲಿ ನಮ್ಮ ಕರ್ತನು **"ಪರಿಶುದ್ಧನು, ನಿರುಪದ್ರವಿಯು, ನಿಷ್ಕಳಂಕನು ಮತ್ತು ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನು"** ಎಂಬ ಈ ಸತ್ಯಗಳ ನಡುವಣ ಇರುವ ಸಾಂದ್ರತೆ ಮತ್ತು ಆ ಬಗ್ಗೆ ದೇವರ ವಾಕ್ಯದಲ್ಲಿನ ಭರವಸೆಗಳನ್ನು ವಿವರಿಸಲು ಶಕ್ತರಾಗುವೆವು. ನಾವೀಗ ಪರಿಗಣಿಸುತ್ತಿರುವ ದೇವರ ವಾಕ್ಯದಲ್ಲಿ ಈ ಪ್ರಸ್ತಾಪದ ಕೀಲಿಕೈ ಇದೆ. ನಮಗೂ ಇತರರಿಗೂ ಕಂಡು ಬರುವ ಸ್ವಾಭಾವಿಕ ಸಂಗತಿಗಳನ್ನೇ ಪ್ರವಾದಿಯು ಪ್ರಕಟಿಸುತ್ತಾನೆ. ಅಂದರೆ, ನಮ್ಮ ಕರ್ತನು ಎಲ್ಲಾ ಉಳಿದ ಜನಾಂಗದವರಂತೆ ಮನೋವ್ಯಥೆ ಯುಳ್ಳವನೂ, ಮರಣ ಶಿಕ್ಷೆಗೆ ಒಳಗಾದವನೂ, ದೇವರಿಂದ ಜಜ್ಜಲ್ಪಟ್ಟವನೂ, ದುಃಖಪಡುವವನೂ ಆಗಿದ್ದನು. ಆದರೆ, ನಂತರದಲ್ಲಿ ಆತನು ಆ ರೀತಿಯಾಗಿ ಕಂಡುಬಂದರೂ ಸತ್ಯಾಂಶದಲ್ಲಿ, ಆತನು ಕಷ್ಟಗಳನ್ನು ಅನುಭವಿಸಿದ್ದು ನಮ್ಮ ಪಾಪಗಳ ಸಲುವಾಗಿಯೇ ಹೊರತು ಆತನು ಪಾಪವನ್ನೇನು ಮಾಡಲಿಲ್ಲ ಎಂದು ವಿವರಿಸುತ್ತಾನೆ; ಆತನ ದೌರ್ಬಲ್ಯಗಳು ಆತನು ನಮ್ಮ ಸಂಕಟಗಳನ್ನು ಮತ್ತು ನಮ್ಮ ದುಃಖದ ಭಾರವನ್ನು ಹೊತ್ತು ಸಾಗುವನಾದ್ದರಿಂದಾಯಿತು. ಆತನು ದೈವ ನಿಯಮದ ಎದುರಿನಲ್ಲಿ ನಮ್ಮ ಸ್ಥಾನವನ್ನು ತೆಗೆದುಕೊಂಡಿರುವ ಪರಿಣಾಮವಾಗಿ ಆತನು ಮರಣವನ್ನನುಭವಿಸಬೇಕಾಯಿತು. 'ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಸನ್ನಿಧಾನಕ್ಕೆ ತರುವ ಸಲುವಾಗಿ ಆತನು ಶ್ರಮೆಯನ್ನನುಭವಿಸಬೇಕಾಯಿತು. ಮೊದಲನೆಯ ಬರೋಣದಲ್ಲಿ ಸ್ವಾಭಾವಿಕ ಇಸ್ರಾಯೇಲ್ಯರ ಪರವಾಗಿ ಮಾತನಾಡುವ ಸಲುವಾಗಿ, ಪ್ರವಾದಿಯು ಹೇಳುವುದೇನೆಂದರೆ – ನಾವು **"ಆತನು ದಿಕ್ಕರಿಸಲ್ಪಟ್ಟವನು, ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು"** (ಯೆಶಾಯ 53:4) ಎಂದು ಹೇಳುತ್ತಾನೆ ಮತ್ತು ಅಂಥಾಃ ದೃಷ್ಟಿಕೋನವು ಸರಿಯಾದುದಲ್ಲವೆಂದು ವಿವರಿಸುವಂತೆ "ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಶಾಂತಿಯನ್ನೀಯುವ ದಂಡನೆಯನ್ನು ಅವನು ಅನುಭವಿಸಿದನು" (ಯೆಶಾಯ 53:5) ಎಂದು ಹೇಳುವವನಾಗಿದ್ದಾನೆ.

ಮತ್ತಾಯನು ಇದೇ ಪ್ರವಾದನೆಯ ನೆರವೇರಿಕೆಗಾಗಿ ಕರೆನೀಡುತ್ತಾ **"ಸಂಜೆಯಾಗಲು ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರೆತಂದರು ; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು. ಇದರಿಂದ – ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು"** (ಮತ್ತಾಯ 8:15–17) ಎಂದು ಬರೆಯುತ್ತಾನೆ.

ನಮ್ಮ ಕರ್ತನ ಗುಣಪಡಿಸುವಿಕೆ ಹಾಗೂ ನಮ್ಮ ಬಲಹೀನತೆಗಳನ್ನು ಆತನ ಮೇಲೆ ತೆಗೆದುಕೊಳ್ಳುವುದರ ನಡುವಿನ ಸಂಬಂಧವು ಈ ದಾಖಲೆಗಳನ್ನು ಓದುವ ಹೆಚ್ಚಿನವರಿಗೆ ಅಷ್ಟೊಂದು ಸಹಜವಾಗಿ ಕಂಡುಬರಲಿಕ್ಕಿಲ್ಲ. ನಮ್ಮ ಕರ್ತನು ಕೇವಲ ತನ್ನಲ್ಲಿರುವ ಗುಣಪಡಿಸುವ ಶಕ್ತಿಯನ್ನು ಉಪಯೋಗಿಸಿದನು, ಅದರಿಂದ ಆತನಿಗೇನೂ ನಷ್ಟವಾಗಲಿಲ್ಲ, ಆತ್ಮೀಕ ಮೂಲದಿಂದ ಆತನಲ್ಲಿ ಮುಗಿಸಲಾರದ ಅಪ್ರತ್ಯಕ್ಷ್ಯವಾದ ಶಕ್ತಿಯೊಂದಿದ್ದು, ಅದು ಎಲ್ಲಾ ರೀತಿಯ ಅದ್ಭುತಗಳನ್ನು ಆತನ ಸ್ವಂತ ಶಕ್ತಿಗೆ, ಜೀವಬಲಕ್ಕೆ ಯಾವುದೇ ಒಂದು ಸಣ್ಣ ಧಕ್ಕೆ ಉಂಟಾಗದಂತೆ ಮಾಡಲು ಅನುಮತಿಸುವುದಾಗಿದೆ ಎಂಬುದಾಗಿ ಸಾಮಾನ್ಯವಾಗಿ ಭಾವಿಸಲಾಗಿದೆ.

"ಉನ್ನತೋನ್ನತ ಮಹಾ ಶಕ್ತಿ"ಯು ನಮ್ಮ ವಿಮೋಚಕನ ಮೇಲೆ ಯಾವ ಅಳತೆಯೂ ಇಲ್ಲದಂತೆ ಸದಾ ಇರುವುದಾಗಿದೆ ಇದರಿಂದ ಆತನು ಅನೇಕ ಅದ್ಭುತ ಪವಾಡಗಳನ್ನು ಸ್ವಂತವಾಗಿ ಯಾವುದೇ ನಷ್ಟವಿಲ್ಲದೆ ಮಾಡಲು ಶಕ್ತನಾಗಿದ್ದಾನೆ ಎಂಬುದನ್ನು ನಾವು ಎಂದೂ ಪ್ರಶ್ನಿಸುವುದಿಲ್ಲ ಮತ್ತು ಆತನು ಈ ದೈವಿಕ ಶಕ್ತಿಯನ್ನು ಕೆಲವೊಮ್ಮೆ ಉಪಯೋಗಿಸಿದನು (ಉದಾ : ನೀರನ್ನು ದ್ರಾಕ್ಷಾರಸ ಮಾಡಿದಾಗ, ಮತ್ತು ಸಹಸ್ರಾರು ಜನರಿಗೆ ಉಣಬಡಿಸಿದಾಗ ಮುಂತಾದ ಕಡೆಗಳಲ್ಲಿ) ಎಂಬುದನ್ನೂ ನಾವು ಅಲ್ಲಗಳೆಯುವುದಿಲ್ಲ. ಆದರೆ ದೇವರ ವಾಕ್ಯಗಳಲ್ಲಿ ದಾಖಲಿಸಿರುವಂತೆ ನಮಗೆ ತಿಳಿದುಬರುವುದೇನೆಂದರೆ, ರೋಗಿಗಳನ್ನು ಗುಣಪಡಿಸಿದ್ದು ನಮ್ಮ ಕರ್ತನು ಮಾಡಿದ ಅಲೌಕಿಕ ಚಮತ್ಕಾರ್ಯವಲ್ಲ, ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಆತನು ರೋಗಿಗಳನ್ನು ಗುಣಪಡಿಸಿದಾಗ ತನ್ನ ಸ್ವಂತ ಜೀವನ ಶಕ್ತಿಯನ್ನು ಅವರಿಗಾಗಿ ವಿನಿಯೋಗಿಸಿದನು; ಇದರ ಪರಿಣಾಮವಾಗಿ, ಆತನು ಗುಣಪಡಿಸಿದವರ ಸಂಖ್ಯೆ ಹೆಚ್ಚುತ್ತಾ ಹೋಗುವಾಗ ನಮ್ಮ ಕರ್ತನ ಜೀವನ ಶಕ್ತಿ, ಬಲ ಇವುಗಳು ಕ್ಷೀಣಿಸತೊಡಗಿದವು. ಇದಕ್ಕೆ ರುಜುವಾತು

ಎಂಬಂತೆ ನಾವು ಹನ್ನೆರಡು ವರ್ಷದಿಂದ ರಕ್ತಕುಸುಮ ರೋಗದಿಂದ ಬಳಲುತ್ತಿದ್ದ ಆ ಬಡ ಹೆಂಗಸು ಭಯಭಕ್ತಿ ಮತ್ತು ವಿಶ್ವಾಸದಿಂದ ಜನರ ಗುಂಪಿನ ಮಧ್ಯೆ ಬಂದು ಕರ್ತನ ಉಡುಪಿನ ಗೊಂಡೆಯನ್ನು ಮುಟ್ಟುತ್ತಲೇ ಆತನಿಂದ ಶಕ್ತಿಹೊರಟುಬಂದು ಆಕೆ ಗುಣಹೊಂದಿಕೊಂಡ ಘಟನೆಯನ್ನು ನೆನಪುಮಾಡಿಕೊಳ್ಳೋಣ. ಆಕೆಯು ಅದುವರೆಗೆ ನಾನಾ ವೈದ್ಯರಿಗೆ ತೋರಿಸಿದ್ದಳು, ಇದಕ್ಕಾಗಿ ತನ್ನಲ್ಲಿದ್ದ ಹಣವನ್ನೆಲ್ಲಾ ವೆಚ್ಚಮಾಡಿದ್ದಳು. ಆದರೂ ಆಕೆ ಯಾವುದೇ ರೀತಿಯ ಗುಣವನ್ನೂ ಕಂಡುಕೊಂಡಿರಲಿಲ್ಲ. ಬದಲಾಗಿ ಆಕೆಯ ರೋಗವು ಉಲ್ಬಣವಾಗುತ್ತಲೇ ಹೋಗಿತ್ತು. **"ಆ ಹೆಂಗಸು ಯೇಸುವಿನ ಸಮಾಚಾರವನ್ನು ಕೇಳಿ – ನಾನು ಅವನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು ಎಂದು ಆಲೋಚಿಸಿ, ಗುಂಪಿನಲ್ಲಿ ಹಿಂದಿನಿಂದ ಬಂದು ಆತನ ಉಡುಪನ್ನು ಮುಟ್ಟಿದಳು. ಮುಟ್ಟಿದ ಕೂಡಲೇ ಆಕೆಗೆ ರಕ್ತಹರಿಯುವುದು ನಿಂತುಹೋದುದರಿಂದ ಆಕೆಯು – ನನಗೆ ಕಾಡಿದ ರೋಗವು ಹೋಗಿ ನನಗೆ ಗುಣವಾಯಿತು ಎಂದು ತನ್ನೊಳಗೆ ತಿಳುಕೊಂಡಳು. ಆಗ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತಿಳಿದುಕೊಂಡು ಗುಂಪಿನಲ್ಲಿ ಹಿಂತಿರುಗಿ – ನನ್ನ ಉಡುಪನ್ನು ಯಾರು ಮುಟ್ಟಿದರು? ಎಂದು ಕೇಳಿದನು. ಆತನ ಶಿಷ್ಯರು ಆತನಿಗೆ – ಜನರು ನಿನ್ನನ್ನು ನೂಕುವುದನ್ನು ಕಂಡು ಕಂಡು ನನ್ನನ್ನು ಯಾರು ಮುಟ್ಟಿದರೆಂದು ಕೇಳುತ್ತೀಯಲ್ಲಾ ಅಂದರು. ಆದರೆ ಆತನು ಈ ಕೆಲಸ ಮಾಡಿದವಳನ್ನು ಕಾಣಬೇಕೆಂದು ಸುತ್ತಲೂ ನೋಡುತ್ತಾ ಇರಲಾಗಿ, ಆ ಹೆಂಗಸು ತನಗಾದುದ್ದನ್ನು ತಿಳುಕೊಂಡು ಅಂಜಿ ನಡಗುತ್ತಾ ಬಂದು ಆತನಿಗೆ ಅಡ್ಡಬಿದ್ದು ಇದ್ದ ಸಂಗತಿಯನ್ನೆಲ್ಲಾ ಹೇಳಿದಳು. ಆತನು ಆಕೆಗೆ – ಮಗಳೇ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು; ನಿನ್ನನ್ನು ಕಾಡಿದ್ದ ರೋಗವು ಹೋಗಿ ನಿನಗೆ ಗುಣವಾಗಲಿ ಎಂದು ಹೇಳಿದನು"** (ಮಾರ್ಕ 5:27–34) ಎಂದು ದಾಖಲಿಸಲಾಗಿದೆ.

ಲೂಕನು ತನ್ನ ಸುವಾರ್ತೆಯಲ್ಲಿ **"ಆತನಿಂದ ಶಕ್ತಿಹೊರಟು ಎಲ್ಲರನ್ನು ವಾಸಿಮಾಡುತ್ತಿದ್ದುದರಿಂದ ಆ ಗುಂಪಿನ ಜನರೆಲ್ಲಾ ಆತನನ್ನು ಮುಟ್ಟುವುದಕ್ಕೆ ಪ್ರಯತ್ನಮಾಡಿದರು"** (ಲೂಕ 6:19) ಎಂಬ ಮಾತುಗಳನ್ನು ಸಹಾ ಗಮನಿಸಿರಿ. ಈ ರೀತಿಯಲ್ಲಿ ನಮ್ಮ ವಿಮೋಚಕನು ಮಾನವಜಾತಿಯ ಬಲಹೀನತೆಗಳನ್ನೆಲ್ಲಾ ತನ್ನ ಮೇಲೆ ತೆಗೆದುಕೊಂಡನು, ನಮ್ಮ ರೋಗಗಳನ್ನು ತನ್ನ ಮೇಲೆ ಹೊತ್ತುಕೊಂಡನು ಎಂಬ ಅರ್ಥವುಂಟಾಗುತ್ತದೆ. ಇದರ ಫಲವಾಗಿ ದಿನದಿಂದ ದಿನಕ್ಕೆ ಇತರರನ್ನು ಗುಣಪಡಿಸುವುದಕ್ಕಾಗಿ ಆತನು ತನ್ನ ಜೀವನ ಶಕ್ತಿಯನ್ನು ಧಾರೆ ಎರೆಯುತ್ತಾ ಅದರ ಪರಿಣಾಮವಾಗಿ ತನ್ನ ಶಕ್ತಿಯನ್ನು ಕುಂದಿಸಿಕೊಂಡನು. ಅಪರಿಮಿತವಾದ ಗುಣಪಡಿಸುವಿಕೆ, ಬೋಧನೆ ಮತ್ತು ಓಡಾಟಗಳಿಂದಲೂ ಆತನ ಜೀವಶಕ್ತಿಯು ಕುಂದುತ್ತಲೇ ಹೋಯಿತು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮ ಕರ್ತನು ತನ್ನ ಸೇವಾವಧಿಯಲ್ಲಿ ಬೋಧಿಸುತ್ತಾ ಪ್ರಯಾಣ ಮಾಡುತ್ತಾ ಸುಮಾರು ಮೂರುವರೆ ವರ್ಷಗಳ ಕಾಲವೂ ನಿರಂತರವಾಗಿ ಬಿಡುವಿಲ್ಲದೆ ದುಡಿದನು.

ನಮ್ಮ ಸ್ವಂತ ಅನುಭವಗಳನ್ನು ಪರಿಗಣಿಸುವಾಗ ಬಹುಶಃ ಇದು ನಮಗೆ ಅಷ್ಟೊಂದು ವಿಶೇಷವೆನಿಸದು. ಕೆಲವು ಸಮಯದಲ್ಲಿ ಮಿತಿಯುಳ್ಳ ಮಟ್ಟದಲ್ಲಿ ಸ್ನೇಹಿತನೊಬ್ಬನಿಗೆ ಇನ್ನೊಬ್ಬ ಸ್ನೇಹಿತನ ತೊಂದರೆಗಳಲ್ಲಿ ಪಾಲುದಾರರಾಗುವ, ಮತ್ತು ನಿರುತ್ಸಾಹಿಗಳನ್ನು ಒಂದು ಮಟ್ಟದಲ್ಲಿ ತಲ್ಲಣಗೊಳಿಸುವ ಮತ್ತು ಕೆಲಮಟ್ಟಿಗೆ ತನ್ನ ಹೆಚ್ಚಾದ ಜೀವನ ಶಕ್ತಿಯನ್ನು ಮತ್ತು ಚೇತನದ ಪ್ರಕಾಶವನ್ನು ಧಾರೆ ಎರೆಯುವ ಆಳವಾದ ಸಹಾನುಭೂತಿ ಸ್ವಭಾವದವರು ಯಾರಿದ್ದಾರೆ? ಆದರೆ ಅಂಥಾಃ ಸಹಾಯಕರ ಪ್ರಭಾವ ಮತ್ತು ಇತರರ ಬಲಹೀನತೆಗಳ ಅಂಥಾಃ ಭಾವನೆಗಳು ಕಾಯಿಲೆಯಲ್ಲಿ ಮತ್ತು ಸಂಕಷ್ಟಗಳಲ್ಲಿರುವವರನ್ನು ಸಂಧಿಸುವವರಲ್ಲಿ ಕಂಡುಬರುವ ಸಹಾನುಭೂತಿಯ ಮಟ್ಟದ ಮೇಲೆ ಹೆಚ್ಚಾಗಿ ಅವಲಂಬಿಸಿದೆ. ಇಷ್ಟು ಮಾತ್ರವಲ್ಲ, ಕೆಲವು ಪ್ರಾಣಿಗಳಲ್ಲಿಯೂ ವಿವಿಧ ಮಟ್ಟದಲ್ಲಿ ಅನುಕಂಪವಿರುತ್ತದೆ; ಉದಾಹರಣೆಗೆ, ಪಾರಿವಾಳವು ಬಹಳ ಸಾಧುವಾದುದೂ, ಸಹಾನುಭೂತಿಯುಳ್ಳದ್ದೂ ಆಗಿದ್ದು ಮೋಶೆಯ ನಿರ್ವಹಣೆ ನಮ್ಮ ಕರ್ತನ ಸಾಂಕೇತಿಕ ಪ್ರತಿನಿಧಿಗಳಲ್ಲಿ ಒಂದಾಗಿದೆ. ಯಾಕೆಂದರೆ, ಇದು ಕೆಲವೊಂದು ಸಂಧರ್ಭಗಳಲ್ಲಿ ಸಹಾಯಕರವಾಗಿ ಕಂಡು ಬಂದಿದೆ. ಪಾರಿವಾಳಗಳನ್ನು ಕೆಲವೊಮ್ಮೆ ರೋಗಿಗಳ ಕೋಣೆಗೆ ತರಲಾಗುತ್ತದೆ. ಇದು ನರಳುವವರಿಗೆ ಬಲು ಉಪಯುಕ್ತವಾಗಿದೆಯೆಂದು ಎಂದು ಪರಿಗಣಿಸಲಾಗುವುದು. ಪಾರಿವಾಳವು, ಬಹುಶಃ ಅದರ ಅನುಕಂಪ ಸ್ವಭಾವದ ಕಾರಣ ಕೆಲವು ಅನುಪಾತದಲ್ಲಿ ರೋಗವನ್ನು ತನ್ನ ಮೇಲೆ ತೆಗೆದುಕೊಳ್ಳುತ್ತದೆ ಮತ್ತು ತನ್ನ ಸ್ವಂತ ಜೀವ ಶಕ್ತಿಯನ್ನು ಕೆಲವು ಮಟ್ಟಿಗೆ ಧಾರೆ ಎರೆಯುತ್ತದೆ. ರೋಗಿಗಳು ಗುಣಹೊಂದಿಕೊಳ್ಳುವ ಅನುಪಾತದಲ್ಲಿ ಈ ಪಕ್ಷಿಗಳು ಕುಂದಿಹೋಗುವುದರಲ್ಲಿ (ಅವುಗಳ ಕಾಲುಗಳು ಸಂಧಿವಾತ ಮುಂತಾದವುಗಳಿಂದ ಸೆಟೆದುಕೊಳ್ಳುವುದರಲ್ಲಿ) ಇದು ವ್ಯಕ್ತವಾಗುತ್ತದೆ.

ನಮ್ಮ ಪ್ರೀತಿ ಮತ್ತು ಸಹಾನುಭೂತಿಗಳು ಮಾತ್ರವೇ ಕಳೆದ ಆರು ಸಹಸ್ರ ವರ್ಷಗಳಿಂದಲೂ ಯಾವುದೇ ಪತನಕ್ಕೆ ಒಳಗಾಗದೇ ಉಳಿದುಕೊಂಡಿವೆ ಮತ್ತು ನಮ್ಮ ಪ್ರೀತಿಯ ವಿಮೋಚಕನು ಸಮರ್ಪಕನಾಗಿದ್ದಾನೆ, ಆದುದರಿಂದ ಆತನಲ್ಲಿ ಸಹಾನುಭೂತಿಯುಳ್ಳ ಪ್ರೀತಿಯ ಈ ಗುಣವು ಸಮೃದ್ಧಿಯಾಗಿ ಕಂಡು ಬರುತ್ತದೆ ಎಂಬುದನ್ನು ನಾವು

ನೆನಪು ಮಾಡಿಕೊಳ್ಳುವಾಗ ಆತನು ಯಾವ ರೀತಿಯಲ್ಲಿ "ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಮರುಕಗೊಂಡನು" ಎಂಬುದನ್ನು ನಾವು ಗ್ರಹಿಸಬಹುದಾಗಿದೆ. ಆತನು ಸಹಾನುಭೂತಿಯಿಂದ ಮನಮುಟ್ಟಿದವನಾದನು, ಯಾಕೆಂದರೆ ಆತನ ಸ್ವಭಾವವು ಅಪ್ಪಟವಾಗಿತ್ತು, ಸಮರ್ಪಕವಾಗಿತ್ತು ಮತ್ತು ಮನಮುಟ್ಟುವುದಾಗಿತ್ತು – ಸ್ವಾರ್ಥತೆಯಿಂದ, ಪಾಪದಿಂದ ವಂಶಪಾರಂಪರ್ಯ ದಿಂದಾಗಲೀ ಅಥವಾ ವೈಯುಕ್ತಿಕ ಪ್ರಾಪ್ತಿಯಿಂದಾಗಲೀ ಕಠಿಣವಾಗಿರಲಿಲ್ಲ, ನಿರ್ದಾಕ್ಷಿಣ್ಯವುಳ್ಳದ್ದಾಗಿರಲಿಲ್ಲ. "ಆತನು ಮನಮರುಗಿದನು" "ಕನಿಕರಪಟ್ಟನು" ಮತ್ತು "ಆ ಜನ ಸಮೂಹವನ್ನು ನೋಡಿ ಮರುಗಿದನು" ಎಂಬೀ ಮಾತುಗಳನ್ನು ನಾವು ನೋಡುತ್ತೇವೆ, ಆತನು ಯೆಹೂದ್ಯರು ಅಳುವುದನ್ನು ಕಂಡಾಗ, ಮಾರ್ಥ ಮರಿಯಳು ಕಣ್ಣೀರಿಡುವುದನ್ನು ಕಂಡಾಗ ಯೇಸು ಸಹಾ ಕನಿಕರಕೊಂಡು 'ಕಣ್ಣೀರು ಬಿಟ್ಟನು' (ಯೋಹಾನ 11:35) ಎಂಬುದಾಗಿ ನಾವು ಓದುತ್ತೇವೆ. ಇದುವರೆಗೆ ಗುಣಧರ್ಮದ ಬಲಹೀನತೆಯನ್ನು ಸೂಚಿಸುತ್ತಿದ್ದ ಸಹಾನುಭೂತಿಯು ಈಗ ವ್ಯತಿರಿಕ್ತವಾಗಿ ಕಂಡುಬರುತ್ತಿವೆ; ಸೃಷ್ಟಿಕರ್ತನ ಸ್ವರೂಪದಲ್ಲಿಯೂ ಸ್ವಭಾವದಲ್ಲಿಯೂ ಇದ್ದ ವ್ಯಕ್ತಿಯ ನಿಜವಾದ ಗುಣಧರ್ಮಕ್ಕೆ ಹೃದಯಹೀನನಾಗಿರು ವುದಾಗಲೀ, ಕಠಿಣತೆ ಮತ್ತು, ನಿರ್ಧಾಕ್ಷಿಣ್ಯತೆಗಳಿಂದ ಇರುವುದಾಗಲೀ ಅಸಾಧ್ಯ. ಆದುದರಿಂದ ಈ ಎಲ್ಲಾ ಸಂಗತಿಗಳೂ ನಮಗೆ ತೋರಿಸಿಕೊಡುವುದೇನೆಂದರೆ **"ಈತನು ಮಾತನಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ"** ಅದಲ್ಲದೆ ಸಹಾನುಭೂತಿ ತೋರಿದನು (ಯೋಹಾನ 7:46). ಪತನಗೊಂಡ ಮಾನವ ಜನಾಂಗದಲ್ಲಿ ಮನುಕುಲದ ಯಾರೂ ಪತನಗೊಂಡ ಪರಿಸ್ಥಿತಿಗಳಿಗೆ, ತೊಂದರೆಗಳಿಗೆ ಮತ್ತು ಯಾತನೆಗಳಿಗೆ ಕರ್ತನು ತೋರಿದಂತಹ ಸಹಾನುಭೂತಿಯನ್ನು ತೋರಿಸಲು ಸಾಧ್ಯವಿಲ್ಲ.

ಇದು ಮಾತ್ರವಲ್ಲದೆ, ನಾವು ನಮ್ಮ ಕರ್ತನು ಈ ಲೋಕಕ್ಕೆ ಬಂದ ಉದ್ಧೇಶವನ್ನು ನೆನಪಿಗೆ ತಂದುಕೊಳ್ಳಬೇಕು. ಆ ಉದ್ಧೇಶವು ಆತನು ತನ್ನನ್ನು ಮೆಚ್ಚಮಾಡಿಕೊಳ್ಳದೆ ಕೇವಲ ತನ್ನ ಶಕ್ತಿಯನ್ನು ಪ್ರದರ್ಶಿಸುವುದಾಗಿರಲಿಲ್ಲ. ಇದನ್ನೂ ಆತನೇ ವಿವರಿಸುತ್ತಾ – **"ಮನುಷ್ಯಕುಮಾರನು ಸಹ ಸೇವೆಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕೂ ಬಂದನು"** (ಮಾರ್ಕ 10:43) ಎಂದಿದ್ದಾನೆ. ನಿಜವಾಗಿಯೂ, ಪಾಪದ ಸಂಬಳ ಕಷ್ಟಾನುಭವವಲ್ಲ, ಆದರೆ ಮರಣ ; ಆದುದರಿಂದ ನಮ್ಮ ಕರ್ತನ ಕಷ್ಟಾನುಭವವು ಮಾತ್ರವೇ ನಮ್ಮ ಪಾಪಗಳ ಸಂಬಳವನ್ನು ತೆರಲು ಸಾಧ್ಯವಿಲ್ಲ ; ಆತನು ಪ್ರತಿಯೊಬ್ಬ ಮಾನವನಿಗೂ **'ಮರಣವನ್ನು ಅನುಭವಿಸುವುದು'** ನಿರಪೇಕ್ಷವಾದ ಅಗತ್ಯವಾಗಿತ್ತು. ಆದುದರಿಂದ ನಾವು **"ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣಾರ್ಥವಾಗಿ ಸತ್ತನು"** (1 ಕೊರಿ. 15:03) ಎಂದು ಓದುತ್ತೇವೆ. ಪರಂತು, ಪಾಪಿಗಳ ಸ್ಥಾನವನ್ನು ತೆಗೆದುಕೊಳ್ಳುವಾಗ ನಮ್ಮ ಕರ್ತನು ಪಾಪದಲ್ಲಿ ಸೂಚಿಸಿರುವಂತೆ – ಮರಣದ ಶಿಕ್ಷೆಯನ್ನೂ ಅನುಭವಿಸಬೇಕಾಗಿತ್ತು. ಮಾನವ ಕುಟುಂಬವು ಬಲಹೀನತೆಗಳಿಂದ, ರೋಗ ರುಜಿನಗಳಿಂದ, ದೌರ್ಬಲ್ಯಗಳ ದೆಸೆಯಿಂದ ಕ್ರಮೇಣವಾದ ಪ್ರಾಣನಷ್ಟ ಪಡಕೊಂಡವರಾಗಿ ಸಾಯುವಾಗ, ಅದಕ್ಕೆ ತಾಳೆಹೊಂದುವಂತೆ ನಮ್ಮ ವಿಮೋಚಕನು ಸಹಾ ಈ ಅನುಭವಗಳ ಮೂಲಕ ಹಾದುಹೋಗುವುದು ಸೂಕ್ತವಾಗಿದೆ. ಆತನು ತಾನೇ ಪಾಪಿಯಾಗದೇ ಇರುವುದರಿಂದ, ಆತನ ಮೇಲೆ ಹೊರಿಸಲ್ಪಟ್ಟ ಪಾಪದ ಎಲ್ಲಾ ಶಿಕ್ಷೆಗಳನ್ನೂ ಆತನು ಪಾಪಿಯ ಸ್ಥಾನವನ್ನು ತೆಗೆದುಕೊಂಡು ನಮಗಾಗಿ ನ್ಯಾಯದ ಪೆಟ್ಟುಗಳನ್ನು ಸಹಿಸುವುದರ ಫಲವಾಗಿದೆ.

ರೋಗಗಳು, ಬೇನೆಗಳು ಮತ್ತು ಎಲ್ಲಾ ಬಲಹೀನತೆಗಳು ಇವುಗಳ ಬಗ್ಗೆ ನಮ್ಮ ಕರ್ತನು ಹೀಗೆ ಅತ್ಯುತ್ತಮವಾಗಿಯೂ ಮತ್ತು ಬಹಳ ಸಹಾಯಕರವಾಗಿಯೂ ಮಾಡಿದನು. ಅಂದರೆ, ಸ್ವಯಿಚ್ಛೆಯಿಂದ ತನ್ನ ಪ್ರಾಣವನ್ನು ಮೂರುವರೆ ವರ್ಷಗಳ ತನ್ನ ಸೇವಾವಧಿಯಲ್ಲಿ ದಿನ ದಿನವೂ ಅರ್ಪಿಸುತ್ತಾ ಬಂದನು, ಕರ್ತನು ಕೃಪೆಯಿಂದ ಮತ್ತು ಪ್ರೀತಿಯಿಂದ ತನ್ನ ಜೀವನದ ಶಕ್ತಿಯನ್ನು ಯಾರಿಗೋಸ್ಕರ ಧಾರೆ ಎರೆದನೋ ಅವರು ಆತನ ಉದ್ದೇಶವನ್ನು ಮೆಚ್ಚಿಕೊಳ್ಳದವರಾದರು. ಹೀಗಾಗಿ, ಬರೆದಿರುವಂತೆ "ಆತನು ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞಕ್ಕಾಗಿ ಅರ್ಪಿಸಿದನು. ತನ್ನ ಪ್ರಾಣವನ್ನು ಧಾರೆಯೆರೆದು ಮರಣಹೊಂದಿ ದ್ರೋಹಿಗಳೊಡನೆ ತನ್ನನ್ನು ಎಣಿಸಿಕೊಂಡನು" (ಯೆಶಾಯ 53: 10,12). ನಾವು ಕೂಡಲೇ ನೋಡುವುದಾದರೆ ಪ್ರತಿಷ್ಠೆಯ ಸಮಯದಿಂದಲೂ ಆತನು ಮೂವತ್ತು ವರ್ಷ ಪ್ರಾಯದವನಾದಾಗ ಸ್ನಾನಿಕನಾದ ಯೋಹಾನನಿಂದ ಯೋರ್ದಾನ್‌ನಲ್ಲಿ ಸ್ನಾನ ದೀಕ್ಷೆ ಪಡಕೊಂಡಾಗಿನಿಂದ ಆತನು ಕಲ್ವಾರಿಯಲ್ಲಿ ಶಿಲುಬೆಯ ಮರಣ ಹೊಂದುವವರೆಗೂ ನಿರಂತರವಾಗಿ ಆತನು ತನ್ನ ಆತ್ಮನನ್ನು ಸುರಿಯುತ್ತಾ ಅರ್ಪಿಸುತ್ತಲೇ ಬಂದನು; ಆತನ ಜೀವನ ಶಕ್ತಿಯು ಆತನು ಸೇವೆಮಾಡುವವರ ಸಹಾಯಕ್ಕಾಗಿ ಆತನಿಂದ ಸತತವಾಗಿ ಹರಿದುಹೋಗುತ್ತಲೇ ಇತ್ತು. ಇವೆಲ್ಲವೂ ಸಾಲದೇ, ನಮ್ಮ ಪಾಪಗಳ ಬೆಲೆಯಾಗಿ, ನಮ್ಮ ವಿಮೋಚಕನು ಸಾಯುವ ಪ್ರಕ್ರಿಯೆಯ ಮೂಲಕ ಹಾದುಹೋಗಬೇಕಾಯಿತು. ಇದು ಕಲ್ವಾರಿಯಲ್ಲಿ

ತುತ್ತತುದಿಗೇರಿದಾಗ ಆತನು **"ತೀರಿತು"** ಎಂದು ಘಟ್ಟಿಯಾದ ಸ್ವರದಿಂದ ಸಾರಿ ಹೇಳಿದಾಗ ಆತನ ಜೀವದ ಕಡೆಯ ಕಿರಣವು ನಂದಿಹೋಯಿತು.

ನಮ್ಮ ಕರ್ತನು ಈ ರೀತಿಯಲ್ಲಿ ತನ್ನ ಜೀವದ ತ್ರಾಣವನ್ನು ವ್ಯಯಮಾಡಿಕೊಂಡು ಮತ್ತು ನಮ್ಮ ಮರಣ ಪ್ರಕ್ರಿಯೆಯ ಅನುಭವಗಳನ್ನು ತಾನೇ ತಾಳುವವನಾಗಿ ತನ್ನನ್ನು ಸಮರ್ಪಿಸಿಕೊಳ್ಳುವುದು ಕೇವಲ ಅಗತ್ಯವಾಗಿತ್ತು ಎಂದು ತೋರಿಬರುತ್ತದೆ. ಆತನು ಶಿಲುಬೆಯ ಮೇಲೆ ಇರುವಾಗ, ಆತನು ಒಂದು ಕ್ಷಣವಾದರೂ ತನ್ನ ಪರಲೋಕದ ತಂದೆಯಿಂದ ಸಂಪೂರ್ಣವಾಗಿ ಬೇರ್ಪಟ್ಟವನಾಗಿ ಪಾಪಿಯ ಸ್ಥಾನವನ್ನು ಅನುಭವಿಸುವ ಅನುರೋಧಕ್ಕೊಳಗಾಗಬೇಕಾಯಿತು ಮತ್ತು ಆತನ ಎಲ್ಲಾ ದೈವಿಕ ಸಹಾಯಗಳು ಹಿಂತೆಗೆಯಲ್ಪಟ್ಟಾಗ ಆತನು **"ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟದ್ದೀ"**? (ಮಾರ್ಕ 15:34) ಎಂದು ಆರ್ತನಾದ ಮಾಡಬೇಕಾಯಿತು. ಆತನು ಪಾಪಿಗಳ ಬದಲಿಯಾಗಿ ಪಾಪಿಗಳ ಶಿಕ್ಷೆಯನ್ನು ವಿವರವಾಗಿ ಸಹಿಸಿಕೊಳ್ಳ ಬೇಕಾಯಿತು. ಇವೆಲ್ಲವೂ ನೆರವೇರುವವರೆಗೂ ಆತನ ಮಹಾತ್ಯಾಗದ ನಿಯೋಗವು ಪೂರ್ಣಗೊಳ್ಳಲಿಲ್ಲ – ಇವೆಲ್ಲ ಪರೀಕ್ಷೆಗಳನ್ನು ನಿಷ್ಠಾಪೂರ್ವಕವಾಗಿ ಜಯಿಸುವವರೆಗೂ ಆತನು "ನಮ್ಮ ರಕ್ಷಣಾ ನಾಯಕನು" ಎಂಬುದಕ್ಕೆ ತಂದೆಯಿಂದ ಅರ್ಹತೆ ಪಡೆಯಲಾಗಿರಲಿಲ್ಲ. ನಂತರದಲ್ಲಿಯೇ ಆತನು ಎಲ್ಲಾ ದೇವದೂತರುಗಳಿಗಿಂತ, ಅಧಿಕಾರಗಳಿಗಿಂತ, ಮಹತ್ವಗಳಿಗಿಂತ ಶ್ರೇಷ್ಠವಾದ ಸ್ಥಾನಕ್ಕೆ ಏರಿಸಲ್ಪಟ್ಟು ತಂದೆಯ ವಿಶ್ವಸಿಂಹಾಸನದಲ್ಲಿ ಪಾಲುದಾರನಾದನು.

ತಂದೆಯಾದ ದೇವರು ಈ ಎಲ್ಲಾ ಅನುಭಗಳನ್ನು ಆತನ ಪ್ರಿಯ ಮಗನಿಗೆ ಕೊಟ್ಟ ಮೇಲೆಯೇ ಆತನನ್ನು ತನ್ನ ಬಲಗಡೆಯಲ್ಲಿ ಕುಳ್ಳಿರಿಸಿಕೊಂಡು ಲೋಕದ ಸಮಗ್ರ ಸಂತತಿಯನ್ನು ಆಶೀರ್ವದಿಸುವ ಮಹಾಭಾಗ್ಯವನ್ನು ಆತನಿಗೆ ಕರುಣಿಸಿದನು. ಇದು ತಾನು ಪಡಕೊಂಡ ಏಕೈಕ ಮಗನಾದ ವಾಕ್ಯನಿಗೆ ನೀಡಿದ ಕೇವಲ ಪರೀಕ್ಷೆಗಳು ಮಾತ್ರವೇ ಆಗಿರಲಿಲ್ಲ. ಇವುಗಳೆಲ್ಲವೂ ನಮ್ಮ ಕರ್ತನಿಗೆ ತಾನು ವಿಮೋಚಿಸಿದವರಿಗೆ ಸಹಾನುಭೂತಿ ತೋರಿಸಲು ಯೋಗ್ಯನನ್ನಾಗಿ ಮಾಡುವುದಾಗಿತ್ತು. ಮತ್ತು ಆತನು ಮುಂದೆಯೂ ತನ್ನ ಮೂಲಕವಾಗಿ – ಸಭೆಗೆ ಈ ಕಾಲದಲ್ಲಿಯೂ, ಮಿಲಿಯಾಂತರ ಯುಗದ ಕಾಲದಲ್ಲಿಯೂ ದೇವರ ಬಳಿಗೆ ಬರುವವರಿಗೆ ಇಂಥಾಃ ಸಹಾನುಭೂತಿಯನ್ನೂ, ಸಹಾಯಗಳನ್ನೂ ತೋರಿಸಬೇಕಾಗಿತ್ತು. **"ಆದುದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದದರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣೆಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರು ವುದರಿಂದ ಶೋಧಿಸಲ್ಪಡುವುದಕ್ಕೆ ಸಹಾಯ ಮಾಡುವುದಕ್ಕೆ ಶಕ್ತನಾಗಿದ್ದಾನೆ"** (ಇಬ್ರಿಯ 2:17–18). **"ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ. ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯೆಂದ ಸಮೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ"** (ಇಬ್ರಿಯ 4: 15,16). **"ತಾನೂ ಬಲಹೀನ ನಾಗಿರುವುದರಿಂದ ಆತನು ಜ್ಞಾನವಿಲ್ಲದವರನ್ನೂ, ಮಾರ್ಗ ತಪ್ಪಿದವರನ್ನೂ ತಾಳ್ಮೆಯಿಂದ ಸಹಿಸಿಕೊಳ್ಳುವುದಕ್ಕೆ ಶಕ್ತನಾಗಿರುವನು"** (ಇಬ್ರಿಯ 5:2). **"ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ. ಇಂಥವನೇ ನಮಗೆ ಬೇಕಾದ ಮಹಾ ಯಾಜಕನು. ಈತನು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು"** (ಇಬ್ರಿಯ 7:25,26).

* * * * * *